ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಏಪ್ರಿಲ್ 01, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 321 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023
janathavani@mac.com
www.janathavani.com
08192 254736 91642 99999

ಮದುವೆ ಹಾಗೂ ಶುಭಸಮಾರಂಭಗಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ
BSC B.S. CHANNABASAPPA & SONS Since - 1938
ಬಿ.ಎಸ್.ಚನ್ನಬಸಪ್ಪ & ಸನ್ಸ್
ಕಾಳಿಕಾದೇವಿ ರಸ್ತೆ | ಪಿ ಜೆ ಬಡಾವಣೆ | ಡೆಂಟಲ್ ಕಾಲೇಜ್ ರಸ್ತೆ
ದಾವಣಗೆರೆ


**ನಡು ರಸ್ತೆಯಲ್ಲೊಂದು ನಿದ್ರೆ...**



ಚಿತ್ರ: ರಷೀದ್, ಜನತಾವಾಣಿ

ಎಲ್ಲೆಡೆ ಚುನಾವಣಾ ಕಾವು ಹೆಚ್ಚಾಗಿದೆ. ಮತ್ತೊಂದು ಕಡೆ ಬಿಸಿಲ ತಾಪಮಾನ ಏರಿಕೆ, ಬರ, ಬಿಸಿಲು, ನೀರಿನ ಸಮಸ್ಯೆ. ಇವೆಲ್ಲವೂ ಇದ್ದದ್ದೇ ಬಿಡಿ ಎಂಬಂತೆ ದಾವಣಗೆರೆಯ ಪಿ.ಬಿ. ರಸ್ತೆಯಲ್ಲಿ ರಸ್ತೆ ವಿಭಜಕದ ಮೇಲೆಯೇ ವ್ಯಕ್ತಿಯೊಬ್ಬ ನಿದ್ರಿಸುತ್ತಾ ವಿಶ್ರಾಂತಿ ಪಡೆಯುತ್ತಿರುವ ಚಿತ್ರವಿದು.

# 3567 ಕೋ.ರೂ. ಪಾವತಿಸಲು ಕೈಗೆ ನೋಟೀಸ್

ನವದೆಹಲಿ, ಮಾ. 31 – ಕಾಂಗ್ರೆಸ್ ಪಕ್ಷ 2014-15ರಿಂದ 2016-17ನೇ ಸಾಲಿನವರೆಗೆ ಸಲ್ಲಿಸಬೇಕಾದ ಆದಾಯ ತೆರಿಗೆಯನ್ನು 1,745 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಇದರೊಂದಿಗೆ ಆದಾಯ ತೆರಿಗೆ ಇಲಾಖೆ ಕಾಂಗ್ರೆಸ್ ಪಕ್ಷದಿಂದ ಕೇಳುತ್ತಿರುವ ತೆರಿಗೆ ಮೊತ್ತ 3,567 ಕೋಟಿ ರೂ.ಗಳಿಗೆ ತಲುಪಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

2014-15ರ ಸಾಲಿಗೆ 663 ಕೋಟಿ ರೂ., 2015-16ರ ಸಾಲಿಗೆ 664 ಕೋಟಿ ರೂ. ಹಾಗೂ 2016-17ರ ಸಾಲಿಗೆ 417 ಕೋಟಿ ರೂ.ಗಳ ತೆರಿಗೆ ಪಾವತಿಸುವಂತೆ ನೋಟಿಸ್ ಕಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಜಕೀಯ ಪಕ್ಷಗಳಿಗೆ ನೀಡುವ ತೆರಿಗೆ ವಿನಾಯಿತಿಯನ್ನು ಆದಾಯ ತೆರಿಗೆ ಇಲಾಖೆ ಅಂತ್ಯಗೊಳಿಸಿದೆ. ಇದರೊಂದಿಗೆ ಪಕ್ಷಗಳು ಸಂಗ್ರಹಿಸುವ ಎಲ್ಲಾ ಹಣಕ್ಕೆ ತೆರಿಗೆ ಪಾವತಿಸಬೇಕು ಎಂದು ತಿಳಿಸಲಾಗಿದೆ.

ತನಿಖಾ ಸಂಸ್ಥೆಗಳು ದಾಳಿ ನಡೆಸುವ ವೇಳೆ ಕಾಂಗ್ರೆಸ್ ಪಕ್ಷದ ನಾಯಕರಿಂದ ಡೈರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಇವುಗಳ ವಿವರಗಳನ್ನು ಆಧರಿಸಿ ಕಾಂಗ್ರೆಸ್ ಪಕ್ಷ ತೆರಿಗೆ ಪಾವತಿಸಬೇಕು ಎಂದು ತಿಳಿಸಲಾಗಿದೆ ಎಂದು ಮೂಲಗಳು ಹೇಳಿವೆ.

1,823 ಕೋಟಿ ರೂ.ಗಳ ತೆರಿಗೆ ಪಾವತಿಸುವಂತೆ ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಬಂದಿದೆ ಎಂದು ಕಾಂಗ್ರೆಸ್ ಪಕ್ಷ ಶುಕ್ರವಾರ ತಿಳಿಸಿತ್ತು. ಈ ಹಿಂದಿನ ವರ್ಷದ ತೆರಿಗೆ ಬೇಡಿಕೆಗಳಿಗೆ ಸಂಬಂಧಿಸಿದಂತೆ ತನ್ನ ಖಾತೆಗಳಿಂದ ಅಧಿಕಾರಿಗಳು ಈಗಾಗಲೇ 135 ಕೋಟಿ ರೂ. ಬಿಡಿಸಿಕೊಂಡಿದ್ದಾರೆ ಎಂದೂ ಪಕ್ಷ ತಿಳಿಸಿತ್ತು.

135 ಕೋಟಿ ರೂ.ಗಳ ತೆರಿಗೆ ಬೇಡಿಕೆಯನ್ನು ಪ್ರಶ್ನಿಸಿ ಕಾಂಗ್ರೆಸ್ ಪಕ್ಷ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ. ಸೋಮವಾರ ಈ ಬಗ್ಗೆ ವಿಚಾರಣೆ ನಡೆಯುವ ಸಾಧ್ಯತೆ ಇದೆ. ಈ ವಿಷಯದಲ್ಲಿ ಪರಿಹಾರ ಕೋರಿ ದಾಖಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ತಳ್ಳಿ ಹಾಕಿತ್ತು.

ಬಿಜೆಪಿ ಪಕ್ಷಕ್ಕೆ ಸಂಬಂಧಿಸಿದಂತೆ ಈ ರೀತಿಯ ಯಾವುದೇ ಕ್ರಮ ತೆಗೆದುಕೊಳ್ಳಲಾಗುತ್ತಿಲ್ಲ. ಕಾಂಗ್ರೆಸ್ ಪಕ್ಷದಿಂದ ತೆರಿಗೆ ವಸೂಲಿ ಮಾಡುತ್ತಿರುವುದು ತೆರಿಗೆ ಉಗ್ರವಾದ ಹಾಗೂ ಹಣಕಾಸು ವಿಷಯದಲ್ಲಿ ಕುಂಠಿತಗೊಳಿಸುವ ಕ್ರಮ ಎಂದು ಆಕ್ಷೇಪಿಸಲಾಗಿತ್ತು. ಲೋಕಸಭಾ ಚುನಾವಣೆ ಸನಿಹದಲ್ಲಿರುವಾಗಲೇ ಈ ರೀತಿಯ ಕ್ರಮ ತೆಗೆದುಕೊಳ್ಳುತ್ತಿರುವುದರ ಬಗ್ಗೆಯೂ ಆಕ್ಷೇಪಗಳು ವ್ಯಕ್ತವಾಗಿದ್ದವು.

ಚುನಾವಣೆಯಲ್ಲಿ ಸಮಾನ ಅವಕಾಶ ನಿರಾಕರಿಸಲಾಗುತ್ತಿದೆ ಎಂದು ಕಾಂಗ್ರೆಸ್ ಪಕ್ಷ ಚುನಾವಣಾ ಆಯೋಗದ ಬಳಿಯೂ ದೂರು ದಾಖಲಿಸಿದೆ.

## ಮನೆಗೆ ತೆರಳಿ ಎಲ್.ಕೆ. ಅಡ್ವಾಣಿಯವರಿಗೆ 'ಭಾರತ ರತ್ನ' ಪ್ರದಾನ ಮಾಡಿದ ರಾಷ್ಟ್ರಪತಿ



ನವದೆಹಲಿ, ಮಾ. 31 - ಬಿಜೆಪಿ ಹಿರಿಯ ನಾಯಕ ಮತ್ತು ಮಾಜಿ ಉಪ ಪ್ರಧಾನಿ ಲಾಲ್ ಕೃಷ್ಣ ಅಡ್ವಾಣಿ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ದೇಶದ ಅತ್ಯುನ್ನತ ನಾಗರಿಕ ಗೌರವ 'ಭಾರತ ರತ್ನ'ವನ್ನು ಇಂದು ಪ್ರದಾನ ಮಾಡಿದರು. ಅಡ್ವಾಣಿಯವರ ಮನೆಗೆ ತೆರಳಿದ ರಾಷ್ಟ್ರಪತಿಯವರು ಹಿರಿಯ ನಾಯಕರಿಗೆ ಗೌರವ ಸಲ್ಲಿಸಿದರು.

ಈ ವೇಳೆ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಪ್ರಧಾನಮಂತ್ರಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಅಡ್ವಾಣಿ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ದೇಶದ ರಾಜಕಾರಣದಲ್ಲಿ ಅಡ್ವಾಣಿಯವರು 7 ದಶಕಗಳ ಕಾಲ ಅಚಲವಾದ ಸಮರ್ಪಣೆ ಮತ್ತು ವಿಭಿನ್ನತೆಯಿಂದ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದ್ದಾರೆ. ಅವರಿಗೆ ಇಂದು ರಾಷ್ಟ್ರಪತಿಯವರು ಭಾರತ ರತ್ನ ಪ್ರದಾನ ಮಾಡಿದ್ದಾರೆ ಎಂದು ರಾಷ್ಟ್ರಪತಿ ಭವನ ತಿಳಿಸಿದೆ.

## ಸಿಯುಇಟಿ-ಯುಜಿ ಅರ್ಜಿ ಗಡುವು ವಿಸ್ತರಣೆ

ನವದೆಹಲಿ, ಮಾ. 31 - ವಿಶ್ವವಿದ್ಯಾಲಯ ಪ್ರವೇಶಕ್ಕಾಗಿ ನಡೆಸುವ ಸಿಯುಇಟಿ - ಯುಜಿ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಗಡುವನ್ನು ಏಪ್ರಿಲ್ 5ರವರೆಗೆ ವಿಸ್ತರಿಸಲಾಗಿದೆ. ಈ ಹಿಂದೆ ಮಾರ್ಚ್ 26ರವರೆಗೆ ಇದ್ದ ಗಡುವನ್ನು ನಂತರ ಮಾರ್ಚ್ 31ಕ್ಕೆ ವಿಸ್ತರಿಸಲಾಗಿತ್ತು. ಈಗ ಮತ್ತೆ ಗಡುವನ್ನು ವಿಸ್ತರಿಸಲಾಗಿದೆ.

## ಕೇರಳದಲ್ಲೂ ಹೆಚ್ಚುತ್ತಿರುವ ತಾರಾ ರಾಜಕೀಯ

**ತಮಿಳುನಾಡಿನಂತೆ ಹೆಚ್ಚುತ್ತಿದೆ ಇಲ್ಲೂ ಚಿತ್ರನಟರ ಪ್ರಭಾವ**

ಕೊಚ್ಚಿ, ಮಾ. 31 - ತಮಿಳುನಾಡಿನಲ್ಲಿ ಚಿತ್ರನಟರು ರಾಜಕೀಯ ವಲಯ ಪ್ರವೇಶಿಸುವುದು ಸಾಕಷ್ಟು ಕಾಲದಿಂದಲೂ ನಡೆದು ಬಂದಿದೆ. ಈಗ ಪಕ್ಕದ ಕೇರಳದಲ್ಲೂ ಅದೇ ಪ್ರವೃತ್ತಿ ಹೆಚ್ಚಾಗುತ್ತಿದೆ.

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಮೂವರು ಪ್ರಮುಖ ನಟರು ರಾಜಕೀಯ ವಲಯಕ್ಕೆ ಧುಮುಕಿದ್ದಾರೆ.

ಹಿರಿಯ ನಾಯಕ ಸುರೇಶ್ ಗೋಪಿ ಅವರು ತ್ರಿಸ್ಸೂರಿನಲ್ಲಿ ಬಿಜೆಪಿ ಟಿಕೆಟ್‌ನಿಂದ ಕಣಕ್ಕಿಳಿದಿದ್ದಾರೆ.

ಇನ್ನೋರ್ವ ನಟ ಎಂ. ಮುಕೇಶ್ ಅವರು ಕೊಲ್ಲಂ ಕ್ಷೇತ್ರದಲ್ಲಿ ಎಡರಂಗದಿಂದ ಸ್ಪರ್ಧಿಸುತ್ತಿದ್ದಾರೆ. ಮುಕೇಶ್ ಅವರು ಹಾಲಿ ಶಾಸಕರೂ ಆಗಿದ್ದಾರೆ. ಈ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ನಟ ಜಿ. ಕೃಷ್ಣಕುಮಾರ್ ಕಣಕ್ಕಿಳಿದಿದ್ದಾರೆ.

ಪಕ್ಕದ ತಮಿಳುನಾಡಿನಲ್ಲಿ ಹಲವಾರು ದಶಕಗಳಿಂದ ಚಿತ್ರರಂಗದವರು ರಾಜಕೀಯಕ್ಕೆ ಕಾಲಿಡುತ್ತಾ ಬಂದಿದ್ದಾರೆ. ಕೇರಳದಲ್ಲೂ ಸಹ ಚಿತ್ರರಂಗ ಹಾಗೂ ರಾಜಕೀಯ ದಿನೇ ದಿನೇ ಹತ್ತಿರವಾಗುತ್ತಿವೆ.

ಪ್ರಸಕ್ತ ಚಿತ್ರರಂಗದ ನಾಲ್ವರು ಕೇರಳ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ಮುಕೇಶ್ ಅವರಲ್ಲದೇ, ಸಾರಿಗೆ ಸಚಿವ ಕೆ. (2ನೇ ಪುಟಕ್ಕೆ)

## ಕಚತೀವು ದ್ವೀಪ ಶ್ರೀಲಂಕಾಗೆ ಕೊಟ್ಟ ಕಾಂಗ್ರೆಸ್: ಮೋದಿ ಟೀಕೆ



ನವದೆಹಲಿ, ಮಾ. 31 - ಕಾಂಗ್ರೆಸ್ ಪಕ್ಷ ನಿರ್ದಾಕ್ಷಿಣ್ಯವಾಗಿ ಕಚತೀವು ದ್ವೀಪವನ್ನು ಶ್ರೀಲಂಕಾಗೆ ಕೊಟ್ಟಿತ್ತು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಟೀಕಿಸಿದ್ದಾರೆ.

ಮಾಧ್ಯಮವೊಂದರಲ್ಲಿ ಬಂದಿರುವ ವರದಿ ಉಲ್ಲೇಖಿಸಿರುವ ಪ್ರಧಾನಿ, ಈ ರೀತಿಯ ವರ್ತನೆ ಭಾರತೀಯರಲ್ಲಿ ಆಕ್ರೋಶ ತರಿಸಿದೆ. ಕಾಂಗ್ರೆಸ್ ಪಕ್ಷವನ್ನು ನಾವು ನಂಬಲಾಗದು ಎಂಬ (2ನೇ ಪುಟಕ್ಕೆ)

# ಸಮಾಜ ಮತ್ತು ಧರ್ಮದ ವಿಚಾರದಲ್ಲಿ ಒಂದಾಗದಿದ್ದರೆ ಅಪಾಯ

### ಶ್ರೀ ವೀರಮಾಹೇಶ್ವರ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟನೆಯಲ್ಲಿ ಉಜ್ಜಯಿನಿ ಜಗದ್ಗುರುಗಳ ಎಚ್ಚರಿಕೆ



ದಾವಣಗೆರೆ, ಮಾ. 31- ಧರ್ಮ, ಸಂಸ್ಕಾರ, ಜಂಗಮತ್ವವನ್ನು ಯಾವುದೇ ಕಾರಣಕ್ಕೂ ಬಿಟ್ಟು ಕೊಡುವ ವ್ಯಕ್ತಿಗಳಾಗದೇ ಸಮಾಜ, ಧರ್ಮದ ವಿಚಾರ ಬಂದಾಗ ಒಂದಾಗದಿದ್ದರೆ ಮುಂದಿನ ದಿನಗಳಲ್ಲಿ ಅಪಾಯದ ದಿನಗಳನ್ನು ಎದುರಿಸಬೇಕಾಗುತ್ತದೆ ಎಂದು ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದಂಗಳವರು ಎಚ್ಚರಿಸಿದರು.

ನಗರದ ಕೆ.ಬಿ. ಬಡಾವಣೆ 10 ನೇ ಕ್ರಾಸ್‌ನಲ್ಲಿ ನಿರ್ಮಾಣಗೊಂಡಿರುವ ಶ್ರೀ ವೀರಮಾಹೇಶ್ವರ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡ ಲೋಕಾರ್ಪಣೆಗೊಳಿಸಿ, ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವಿರೋಧಿ ರಹಿತ, ಯಾರಿಗೂ ಕೆಡಕು ಬಯಸದವ ನಿಜವಾದ ವೀರಶೈವ. ಆದರೆ, ಸಮಾಜದಲ್ಲಿ ಪರಸ್ಪರ ಟೀಕೆ, ಕಾಲೆಳೆಯುವ ಕೆಲಸಗಳು ಜಾಸ್ತಿ ನಡೆಯುತ್ತಿವೆ. ಇನ್ನೊಬ್ಬರನ್ನು ತುಳಿದು ಬದುಕುವವನು ಯಾವತ್ತೂ ನಾಯಕನಾಗಿ ಇರಲು ಸಾಧ್ಯವಿಲ್ಲ. ತನ್ನಂತೆ ತನ್ನಷ್ಟೇ ಎತ್ತರಕ್ಕೆ ಹತ್ತು ಜನರನ್ನು ಬೆಳೆಸುವವನು ನಾಯಕನಾಗಲು ಸಾಧ್ಯ ಎಂದು ಪ್ರತಿಪಾದಿಸಿದರು.

ಜಗತ್ತಿಗೆ ಬುದ್ದಿ ಹೇಳುವ ಜಂಗಮರು ಮತ್ತೊಬ್ಬರ ಹತ್ತಿರ ತಮ್ಮ ಸಮಸ್ಯೆಯ ಬಗ್ಗೆ ಪಂಚಾಯತಿಗೆ ಹೋಗುವುದು ವಿಪರ್ಯಾಸದ ಸಂಗತಿ. ಯಾರೂ ಕೂಡ ಜಂಗಮತ್ವ ಮರೆಯಬಾರದು. ಜಂಗಮರಲ್ಲಿ ಯಾವುದೇ ತಾರತಮ್ಯ ಇರಬಾರದು. ಗುರುವಿಗೆ ನೀಡುವ ಗೌರವವನ್ನು ಲಿಂಗ ಮತ್ತು ಜಂಗಮರಿಗೆ ನೀಡಬೇಕೆಂದರು.

ಶ್ರಾವಣ ಮಾಸ ಸೇರಿದಂತೆ ಹಬ್ಬ ಹರಿದಿನಗಳಲ್ಲಿ ಭಕ್ತರು ತಮ್ಮ ಜಂಗಮರನ್ನು ಆಹ್ವಾನಿಸಿ, ಗದ್ದುಗೆ ಹಾಕಿ ಕುಳ್ಳಿರಿಸಿ ಗೌರವಿಸಿ, ಪ್ರಸಾದ ನೀಡಿ, ಜೊತೆಗೆ ದಕ್ಷಿಣೆ ನೀಡಿ ಕಳುಹಿಸುತ್ತಿದ್ದರು. ಕಾಲಕ್ರಮೇಣ ಅಂತಹ ಪದ್ಧತಿ, ಸಂಸ್ಕೃತಿ, ಪರಂಪರೆ ಮರೆಯಾಗುತ್ತಿದೆ. ಇದಕ್ಕೆ ನಮ್ಮಲ್ಲಿರುವ ಲೋಪವೇನು ಎಂಬುದರ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಸಮ್ಮುಖ ವಹಿಸಿದ್ದ ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಪ್ರತಿಯೊಬ್ಬರೂ ಹೃದಯ ವೈಶಾಲ್ಯತೆ ಬೆಳೆಸಿಕೊಳ್ಳಬೇಕು. ಸಾಂಗತ್ಯ, ಸಂಪರ್ಕ, ಸದ್ಗುಣಗಳು ಅಗತ್ಯವಾಗಿ ಬೇಕಾಗಿವೆ. ಇಂದು ಹಿರಿತನಕ್ಕೂ ಮಾನ್ಯತೆ ಇಲ್ಲದಂತಾಗಿದೆ. ಕಿರಿತನ ಕೂಡ ಬದುಕು ಕಟ್ಟಿಕೊಳ್ಳುತ್ತಿಲ್ಲ ಎಂದು ವಿಷಾದಿಸಿದರು.

ಜಂಗಮ ಸಮಾಜದಲ್ಲಿ ಒಗ್ಗಟ್ಟು, ಆಚಾರ, ವಿಚಾರ, ಸಂಸ್ಕಾರದ ಕೊರತೆ ಕಂಡು ಬರುತ್ತಿದೆ. (2ನೇ ಪುಟಕ್ಕೆ)

## ಮೋದಿಯಿಂದ ಮ್ಯಾಚ್ ಫಿಕ್ಸಿಂಗ್ ಯತ್ನ: ರಾಹುಲ್


ನವದೆಹಲಿ, ಮಾ. 31 - ಲೋಕಸಭಾ ಚುನಾವಣೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮ್ಯಾಚ್ ಫಿಕ್ಸಿಂಗ್‌ಗೆ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ರಾಮಲೀಲಾ ಮೈದಾನದಲ್ಲಿ ಐ.ಎನ್.ಡಿ.ಐ.ಎ. ಮೈತ್ರಿಕೂಟದಿಂದ ಆಯೋಜಿಸಲಾಗಿದ್ದ (2ನೇ ಪುಟಕ್ಕೆ)

## ರಾಗಾ ಮ್ಯಾಚ್ ಫಿಕ್ಸಿಂಗ್‌ಗೆ ಕಚತೀವು ತಿರುಗೇಟು

ನವದೆಹಲಿ, ಮಾ. 31 - ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾಡಿರುವ ಮ್ಯಾಚ್ ಫಿಕ್ಸಿಂಗ್ ಆರೋಪ ತಳ್ಳಿ ಹಾಕಿರುವ ಬಿಜೆಪಿ, ಗಾಂಧಿ ಕುಟುಂಬದ ಲಾಭಕ್ಕಾಗಿ ಶ್ರೀಲಂಕಾಗೆ ಕಚತೀವು ದ್ವೀಪ ನೀಡುವ ಮೂಲಕ ಒಪ್ಪಂದ (2ನೇ ಪುಟಕ್ಕೆ)

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥
ಶ್ರೀಮತಿ ಶಾಂತಮ್ಮ ಜಯರುದ್ರಪ್ಪ ಮತ್ತು ಮಕ್ಕಳು
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 28.03.2024ನೇ ಗುರುವಾರ ಮಧ್ಯಾಹ್ನ 02.50ಕ್ಕೆ ನನ್ನ ಪೂಜ್ಯ ಪತಿಯವರಾದ
ಬಿಳಿಚೋಡು ಶೆಟ್ರು
ಶ್ರೀ ಎಸ್.ಕೆ. ಜಯರುದ್ರಪ್ಪ (ಜಯಣ್ಣ)
ಜಯವೀರ್ ಇಂಜಿನಿಯರಿಂಗ್ ಇಂಡಸ್ಟ್ರೀಸ್, ದಾವಣಗೆರೆ ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಸಮಾರಾಧನೆಯನ್ನು
ದಿನಾಂಕ 01.04.2024ನೇ ಸೋಮವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು : ಮೃತರ ತಮ್ಮಂದಿರಾದ : ಶ್ರೀ ಎಸ್.ಕೆ. ವೀರಣ್ಣ, ಶ್ರೀ ಎಸ್.ಕೆ. ವೀರಭದ್ರಪ್ಪ
ಶ್ರೀ ಎಸ್.ಕೆ. ಉದಯಶಂಕರ್, ಯು.ಎಸ್.ಎ ♦ ಶ್ರೀ ಎಸ್.ಕೆ. ರಾಜೇಂದ್ರ, ಯು.ಎಸ್.ಎ
ಮಕ್ಕಳಾದ : ಶ್ರೀ ಪ್ರಭು ಶಂಕರ್ ಜೆ. ಶೆಟ್ರು, ಯು.ಎಸ್.ಎ ♦ ಶ್ರೀಮತಿ ಸುನೀತ ಮೃತ್ಯುಂಜಯ ಆರ್.ಟಿ
ಶ್ರೀ ಆನಂದ ಜೆ. ಶೆಟ್ರು ಹಾಗೂ ಬಂಧು-ಮಿತ್ರರು. ಮೊ : 94481 14075, 98806 20002

**ದ್ವಿತೀಯ ವರ್ಷದ ಪುಣ್ಯಸ್ಮರಣೆ**



ದಿ॥ ಶ್ರೀ ಕಣಕುಪ್ಪಿ ನಾಗರಾಜ್ ಜೆ.ಹೆಚ್.
ನಿಧನ: 01.04.2022
ನೀವು ಲಿಂಗೈಕ್ಯರಾಗಿ ಇಂದಿಗೆ ಎರಡು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ....
ತಾಯಿ : ಕಣಕುಪ್ಪಿ ಬಸಮ್ಮ ಪತ್ನಿ : ಶ್ರೀಮತಿ ಸುಮಿತ್ರ ಕೆ.ಎನ್.
ಪುತ್ರ : ಜಗದೀಶ್ ಕೆ.ಎನ್., ಪುತ್ರಿಯರು, ಸಹೋದರರು, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು
ಕಣಕುಪ್ಪಿ ಟ್ರೇಡಿಂಗ್ ಕಂಪನಿ., ಚಾಮರಾಜ ಪೇಟೆ, ದಾವಣಗೆರೆ.
ಹಾಗೂ ವಿಜಯಲಕ್ಷ್ಮಿ ಎಂಟರ್‌ಪ್ರೈಸಸ್, ನರಸರಾಜ ರಸ್ತೆ, ದಾವಣಗೆರೆ.
ಹಾಗೂ ಬಂಧುಗಳು-ಮಿತ್ರರು

**ಸಿದ್ಧಗಂಗಾ MSS Quiz–2024**
ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳೇ ಗಮನಿಸಿ!
ಈ ಪ್ರಶ್ನೆಗಳಿಗೆ ಉತ್ತರಿಸಬಹುದಾದರೆ ನೀವು ಕೂಡ 25,000/- ರೂ. ಗೆಲ್ಲಬಹುದು.

1) The midpoint of the line joining coordinates (6,3) and (4,7) is
(6,3) (4,7) ನಿರ್ದೇಶಾಂಕಗಳ ಮಧ್ಯಬಿಂದು
A) (5, 5) B) (2, -4) C) (1, 2) D) (10, 10)

2) 7,11,15 the common difference of this AP is
7,11,15 ಈ APಯ ಸಾಮಾನ್ಯ ವ್ಯತ್ಯಾಸ
A) 2 B) -4 C) 4 D) 3

3) He, Ne, Ar gases are generally called as
He, Ne, Ar ಅನಿಲಗಳನ್ನು ಸಾಮಾನ್ಯವಾಗಿ ಹೀಗೆ ಕರೆಯಲಾಗುತ್ತದೆ.
A) Inert B) Acidic C) Basic D) Neutral
A) ಜಡ B) ಆಮ್ಲೀಯ C) ಪ್ರತ್ಯಾಮ್ಲೀಯ D) ತಟಸ್ಥ

4) Ohm's law is given by the formula
ಓಮ್‌ನ ನಿಯಮವನ್ನು ಈ ಸೂತ್ರದಿಂದ ನೀಡಲಾಗಿದೆ.
A) $V=IR$ B) $I=VR$ C) $R=IV$ D) $V=I^2R$

MSS Quiz QR Code

ಎಸ್.ಎಸ್.ಎಲ್.ಸಿ. ವಿಜ್ಞಾನ ಮತ್ತು ಗಣಿತ ಪಠ್ಯಪುಸ್ತಕ ಆಧಾರಿತ 60(MCQ's)
30 ಗಣಿತ, 30 ವಿಜ್ಞಾನ. (ಕನ್ನಡ ಹಾಗೂ ಇಂಗ್ಲೀಷ್ ಮಾಧ್ಯಮದಲ್ಲಿ)
ದಿನಾಂಕ: 07.04.2024 ಭಾನುವಾರ ಬೆಳಿಗ್ಗೆ 11 ಗಂಟೆಗೆ
ನಿಮ್ಮ ಹೆಸರನ್ನು ಈ ವಾಟ್ಸಪ್ ಸಂಖ್ಯೆ 8073054295 ಗೆ ಕಳುಹಿಸಿ.
MSS Quiz ನಲ್ಲಿ ಭಾಗವಹಿಸಿ ಬಹುಮಾನ ಗೆಲ್ಲಿರಿ...

# ಎಸ್‌ವಿಆರ್ - ಎಚ್‌ಪಿಆರ್ ನಮಗೆ ಜೋಡಿ ಶಕ್ತಿ

## ಜಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪ್ರಚಾರ



ಜಗಳೂರು, ಮಾ.31- ಜಗಳೂರು ವಿಧಾನ ಸಭಾ ಕ್ಷೇತ್ರದಲ್ಲಿ ಎರಡು ಶಕ್ತಿಗಳು ನಮ್ಮ ಜೊತೆ ಇವೆ. ಒಂದು ಎಸ್.ವಿ.ರಾಮಚಂದ್ರಪ್ಪ, ಇನ್ನೊಂದು ಎಚ್.ಪಿ.ರಾಜೇಶ್. ಇವರಿಬ್ಬರ ಜೊತೆ ಲಕ್ಷಾಂತರ ಬಿ ಜೆಪಿ ಕಾರ್ಯಕರ್ತರ, ಪ್ರಮುಖ ನಾಯಕರ, ಮೋದಿ ಜೀ ಅ ಭಿಮಾನಿಗಳ ಆಶೀರ್ವಾದ ನಮ್ಮ ಮೇಲಿದೆ ಎಂ ದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ ತಿಳಿಸಿದರು.

ಜಗಳೂ ರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತಯಾಚಿ ಸಿ ಮಾತನಾಡಿದ ಅವರು, ಜಗಳೂರು ಕ್ಷೇತ್ರದಲ್ಲಿ ಮಾಜಿ ಶಾಸಕ ಎಸ್.ವಿ.ರಾಮಚಂದ್ರಪ್ಪ ಮತ್ತು ಎಚ್.ಪಿ.ರಾಜೇಶ್ ಇಬ್ಬರು ಒಂದು ಶಕ್ತಿ ಇದ್ದಂತೆ. ಆ ಶಕ್ತಿಗ ಳು ನನ್ನ ಜೊತೆ ನಿಂತಿರೋದು ಗೆಲುವಿನ ದಿಕ್ಸೂಚಿ ಎಂದರು.

ಜಗಳೂರು ತಾ ಲ್ಲೂಕಿಗೆ ಕೇಂದ್ರದಿಂದ ಕೋಟ್ಯಂ ತರ ರೂ. ಅನುದಾನ ಬಂದಿದೆ. ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕೂಡ ಸಂಸದರ ಪ್ರದೇಶಾಭಿವೃ ದ್ಧಿ ಅನುದಾನದಲ್ಲಿ ಸಮುದಾಯ ಭವನ, ಸಿಸಿ ರಸ್ತೆ, ರಂಗಮಂದಿರ, ಶಾಲಾ ಕೊಠಡಿ, ಶುದ್ಧ ಕುಡಿವ ನೀರಿನ ಘಟಕ, ಅಂಗನವಾಡಿ ಕಟ್ಟಡ ಸೇರಿದಂತೆ ಅನೇಕ ಕೆಲಸ ಕಾರ್ಯಗಳನ್ನು ಮಾಡಿಸಿದ್ದಾರೆ. ಜಗಳೂರು ತಾಲ್ಲೂಕಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಕೆರೆಗಳಿಗೆ ನೀರು ತುಂಬಿಸಲು ಕೋಟ್ಯಂತರ ರೂಪಾಯಿ ಅನುದಾನ ಮಂಜೂರು ಮಾಡಿಸಿದ್ದಾರೆ ಎಂದರು.

ಜಗಳೂರು ಮಾಜಿ ಶಾಸಕ ಎಸ್.ವಿ. ರಾಮಚಂದ್ರಪ್ಪ ಮಾತನಾಡಿ, ಜಗಳೂರು ತಾಲ್ಲೂಕಿನ ಅಭಿವೃದ್ಧಿಗೆ ಸಂಸದ ಜಿ.ಎಂ.ಸಿದ್ದೇಶ್ವರ್ ಅವರ ಕೊಡುಗೆ ಅಪಾರ. ಅಭಿವೃದ್ಧಿ ವಿಚಾರದ ಲ್ಲಿ ಅವರ ದೂರದೃಷ್ಟಿ ನಮ್ಮಂತಹವರಿಗೆ ಮಾರ್ಗದರ್ಶನ. ಗೆಳೆಯ ಎಚ್.ಪಿ.ರಾಜೇಶ್ ಮತ್ತು ನಾನು ಜೊತೆಯಾಗಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರ ಪರವಾಗಿ ನಿಂತಿದ್ದು, 1 ಲಕ್ಷಕ್ಕೂ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸುತ್ತೇವೆ ಎಂದರು.

ಮಾಜಿ ಶಾಸಕ ಎಚ್ .ಪಿ. ರಾ ಜೇಶ್ ಮಾತನಾಡಿ, ಸಂಸ ದ ಜಿ. ಎಂ .ಸಿದ್ದೇಶ್ವರ್ ಹಾಗೂ ಗಾಯತ್ರಿ ಸಿದ್ದೇ ಶ್ವ ರ್ ಅಮ್ಮನವರನ್ನು ಬಹಳ ವರ್ಷಗಳಿಂದ ನೋ ಡಿ ದ್ದೇನೆ. ನಾನು ಮೊದಲು ಬಿಜೆಪಿಯಲ್ಲಿ ದ್ದಾ ಗ ಅವರು ನನ್ನನ್ನು ಮಗನಂತೆ ಬೆಂಬಲಿಸಿ ದ್ದರು. ಈಗ ಪುನಃ ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಕ್ಕೆ ಬರಬೇಕು, ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ ಅವರ ಪತ್ನಿ ಗಾಯಿತ್ರಿ ಸಿದ್ದೇಶ್ವರ ಅವರು ಗೆಲುವು ಸಾಧಿಸಬೇಕು ಎಂದು ಬಿಜೆಪಿಗೆ ಬಂದಿದ್ದೇನೆ. ನಾನು ರಾಮಣ್ಣ ಜೊತೆಯಾಗಿ ಪಕ್ಷ ಸಂಘಟನೆ ಮಾಡುತ್ತೀವಿ. ಗಾಯಿತ್ರಿ ಅವರನ್ನು ಗೆಲ್ಲಿಸುತ್ತೇವೆ ಎಂದರು.

ಶ್ರೀಮತಿ ಇಂದಿರಾ ರಾಮಚಂದ್ರ, ಬಸವರಾಜ್ , ಸಂತೋಷ್, ಬಸಣ್ಣ, ಕಲ್ಲೇಶ್, ಏಕಾಂತ, ಶಿವಣ್ಣ, ಬಿಜೆಪಿ ಮಂಡ ಲ ಅಧ್ಯಕ್ಷ ಪಲ್ಲಾ ಗಟೆ ಎಚ್ .ಸಿ. ಮಹೇಶ್ , ಜೆಡಿಎಸ್ ರಾಜ್ಯ ಕಾ ರ್ಯದರ್ಶಿ ಕಲ್ಲೇರುದ್ರೇಶ್, ಕೃಷ್ಣನಾಯ್ಕ್ ಸೇರಿದಂತೆ ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೂತ್ ಅಧ್ಯಕ್ಷರ, ನೂರಾರು ಸಂ ಖ್ಯೆ ಯ ಕಾರ್ಯಕರ್ತರು ಭಾಗಿಯಾಗಿದ್ದರು.

**ವಿವಿಧೆಡೆ ಪ್ರಚಾರ:** ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ್ ಅವರು ಜಗಳೂರು ಪಟ್ಟಣ ಪ್ರವೇಶಿಸುತ್ತಿದ್ದಂತೆ ಅಂಬೇಡ್ಕರ್ ವೃತ್ತದಲ್ಲಿ ನೂರಾರು ಸಂಖ್ಯೆಯ ಬಿಜೆಪಿ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಅಭ್ಯರ್ಥಿಯನ್ನು ಅದ್ದೂರಿಯಾಗಿ ಸ್ವಾಗತಿಸಿದರು.

ವೃತ್ತದಲ್ಲಿದ್ದ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಗಾಯಿತ್ರಿ ಸಿದ್ದೇಶ್ವರ ಅವರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು . ಬಳಿಕ ಜಗಳೂರು ಪಟ್ಟಣದಲ್ಲಿ ಲೋಕಸ ಭಾ ಚುನಾವಣಾ ಕಾರ್ಯಾಲಯ ಉದ್ಘಾಟಿಸಿ, ಪ್ರಮುಖ ಬೀದಿಗಳಲ್ಲಿ ತೆರೆದು ವಾಹನದ ಮೂಲಕ ಮತಯಾಚನೆ ಮಾಡಿದರು.

ಮಾದಮುತ್ತೇನಹ ಳ್ಳಿ, ಅಣಬೂರು, ಹನುಮಂತಾಪುರ, ದೊಣೆಹಳ್ಳಿ ಹಿರೇಮಲ್ಲನಹೊಳೆ, ಮುಸ್ಟೂರು, ಕಲ್ಲೇದೇವರಪುರ, ತೋರಣಗಟ್ಟೆ, ಬಿದರಿಕೆರೆ ವ್ಯಾಪ್ತಿಯಲ್ಲಿ ಭರ್ಜರಿ ಪ್ರಚಾರ ನಡೆಸಿದರು.

### ಬಿಜೆಪಿ ಸೇರ್ಪಡೆ

ಜಗಳೂರು ವಿಧಾನಸಭಾ ಕ್ಷೇತ್ರದ ಹನುಮಂತಾಪುರ ಗ್ರಾಮದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಗಾಯತ್ರಿ ಸಿದ್ದೇಶ್ವರ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಗೊಂಡರು. ದಾವಣಗೆರೆಗೆ ಗಾಯತ್ರಿ ಸಿದ್ದೇಶ್ವರ್, ಕೇಂದ್ರಕ್ಕೆ ಮೋದಿ ಎಂಬ ಆಶಯದೊಂದಿಗೆ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾಗುತ್ತಿದ್ದೇವೆ ಎಂದರು. ವಿವಿಧ ಗ್ರಾಮಗಳಲ್ಲಿ ಎಚ್.ಪಿ. ರಾಜೇಶ್ ಅಭಿಮಾನಿಗಳು, ಆಪ್ತರು ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾಗುವ ಮೂಲಕ ಗಾಯಿತ್ರಿ ಸಿದ್ದೇಶ್ವರ್ ಅವರ ಕೈ ಬಲಪಡಿಸಿದರು.

# ರಾಜ್ಯದ ಬೇಡಿಕೆಗಳಿಗೆ ಕ್ಯಾರೇ ಎನ್ನದೇ ದ್ವೇಷದ ರಾಜಕಾರಣ ಮಾಡುತ್ತಿರುವ ಕೇಂದ್ರ ಸರ್ಕಾರ

ಹೊನ್ನಾಳಿ, ಮಾ.31- ರಾಜ್ಯದಲ್ಲಿ ಭೀಕರ ಬರಗಾಲವಿದ್ದರೂ ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿ, ಜನಪರ ಸರ್ಕಾರವೆಂದು ತನ್ನ ಬದ್ಧತೆ ತೋರಿದ್ದು, ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮತ ನೀಡುವ ಮೂಲಕ ಕಾಂಗ್ರೆಸ್ ಪಕ್ಷದ ಋಣವನ್ನು ತೀರಿಸುವಂತೆ ಶಾಸಕ ಡಿ.ಜಿ. ಶಾಂತನಗೌಡ ಕರೆ ನೀಡಿದರು.

ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಇಂದು ಏರ್ಪಾಡಾಗಿದ್ದ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಪರ ಮತಯಾಚನೆ ಮತ್ತು ಕಾರ್ಯಕರ್ತರ, ಮುಖಂಡರುಗಳ ಸಮಾವೇಶ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ಸರ್ಕಾರವು ಪ್ರತೀ ಕುಟುಂಬಕ್ಕೆ ತಿಂಗಳಿಗೆ ಗ್ಯಾರಂಟಿ ಯೋಜನೆಗಳ ಮೂಲಕ 5-6 ಸಾವಿರ ಹಣ ನೀಡುತ್ತಿದೆ. ಆದರೆ, ಬಿಜೆಪಿ ಸರ್ಕಾರವು ವರ್ಷಕ್ಕೆ 2 ಸಾವಿರ ನೀಡುತ್ತಿರುವುದನ್ನೇ ದೊಡ್ಡದಾಗಿ ಬಿಂಬಿಸಿಕೊಳ್ಳಲು ಹೋಗುತ್ತಿದೆ ಎಂದು ಅವರು ಲೇವಡಿ ಮಾಡಿದರು.

ಗ್ಯಾರಂಟಿ ಯೋಜನೆಗಳಲ್ಲೊಂದಾದ ಅನ್ನಭಾಗ್ಯ ಯೋಜನೆಗೆ ಕೆಜಿಗೆ 34 ರೂ. ಕೊಡುತ್ತೇವೆಂದು ಕೇಳಿದರೂ ಕೊಡದೇ, ಇದೀಗ ಚುನಾವಣೆ ಸಮೀಪಿಸಿದೆ ಎಂದು ಭಾರತ್ ರೈಸ್ ಹೆಸರಿನಲ್ಲಿ 29 ರೂ.ಗೆ ಅಕ್ಕಿ ಕೊಡುತ್ತಿರುವ ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಹರಿಹಾಯ್ದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಮಂಜಪ್ಪ ಮಾತನಾಡಿ, ಕಾಂಗ್ರೆಸ್ ಸರ್ಕಾರದ 5 ಗ್ಯಾರಂಟಿ ಯೋಜನೆಗಳು ಜನರ ಕಣ್ಣ ಮುಂದಿವೆ. ಆದರೆ ಮೋದಿ ಸರ್ಕಾರದ ಗ್ಯಾರಂಟಿ ಯೋಜನೆಗಳು ಯಾವುವು ಎಂದು ಬಿಜೆಪಿಯವರು ಹೇಳಬಲ್ಲಿರಾ ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಶಾಮನೂರು ಕುಟುಂಬದ ಸೊಸೆಯಾಗಿ ಕಳೆದ 25 ವರ್ಷಗಳಿಂದ ಮಾವ ಮತ್ತು ಪತಿಯ ಜೊತೆಗೂಡಿ ರಾಜಕೀಯ ಸೇವೆ ಮಾಡಿದ್ದಲ್ಲದೇ ಎಸ್.ಎಸ್. ಟ್ರಸ್ಟ್ ವತಿಯಿಂದ ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದ ಅನುಭವವಿದೆ ಎಂದು ತಮ್ಮ ವ್ಯಕ್ತಿ ಪರಿಚಯ ಮಾಡಿಕೊಂಡರು.

ಈಗಾಗಲೇ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಯೋಜನೆಗಳನ್ನು ಹಾಕಿಕೊಂಡಿದ್ದು ಮಧ್ಯಕರ್ನಾಟಕ ದಾವಣಗೆರೆಗೆ ಏರ್‌ಪೋರ್ಟ್ ಅವಶ್ಯಕತೆಯನ್ನು ಮನಗಂಡಿದ್ದೇನೆ, ಚೀಲೂರು ಬಾಗೇವಾಡಿ ನಡುವೆ ಸಂಪರ್ಕ ಸೇತುವೆ, ತುಂಗಭದ್ರಾ ನದಿಗೆ ತಡೆಗೋಡೆ ನಿರ್ಮಿಸಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಬವಣೆ ನೀಗಿಸುವುದು, ಕೈಗಾರಿಕೆಗಳ ಸ್ಥಾಪನೆ, ಮಹಿಳಾ ಸಬಲೀಕರಣ ಸೇರಿದಂತೆ ಸಂಸದೆಯಾಗಲು ಅವಕಾಶ ಸಿಕ್ಕರೆ ಜಿಲ್ಲೆಯ ಅಭಿವೃದ್ಧಿಗೆ ನನ್ನ ಪತಿಯ ಸಹಕಾರ ಮತ್ತು ಕಾಂಗ್ರೆಸ್ ಶಾಸಕ ಡಿ.ಜಿ. ಶಾಂತನಗೌಡರ ಸಹಕಾರದಿಂದ ಅಭಿವೃದ್ಧಿಯನ್ನು ಮಾಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಡಿ.ಬಿ. ಗಂಗಪ್ಪ, ಸಾಸ್ವೆಹಳ್ಳಿ ಮತ್ತು ನ್ಯಾಮತಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಆರ್.ನಾಗಪ್ಪ, ಡಿ.ಜಿ. ವಿಶ್ವನಾಥ್, ತಾಲ್ಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ರವೀಶ್, ಮಾಜಿ ಜಿಪಂ ಅಧ್ಯಕ್ಷೆ ಶೀಲಾ ಗದ್ದಿಗೇಶ್, ಮುಖಂಡರುಗಳಾದ ಎಚ್.ಎ. ಉಮಾಪತಿ, ಎ.ಆರ್.ಚಂದ್ರಶೇಖರಪ್ಪ, ವರದ ರಾಜಪ್ಪಗೌಡ, ಹನುಮನಹಳ್ಳಿ ಬಸವರಾಜಪ್ಪ, ಎಚ್.ಎ.ಗದ್ದಿಗೇಶ್, ಸಣ್ಣಕ್ಕಿ ಬಸವನಗೌಡ, ಪ್ರಶಾಂತ್ ಬಣ್ಣಜ್ಜಿ, ಮನೋಜ್ ವಾಲಜ್ಜಿ, ಚೀಲೂರು ವಾಜೀದ್, ಜಬ್ಬಾರ್ ಅಲಿ ಖಾನ್, ಕೊಡತಾಳ್ ರುದ್ರೇಶ್, ದಿಡಗೂರು ತಮ್ಮಣ್ಣ, ವಸಂತನಾಯ್ಕ್, ಎಚ್.ಬಿ.ಅಣ್ಣಪ್ಪ, ಎಚ್. ಡಿ.ವಿಜೇಂದ್ರಪ್ಪ, ಸುಲೇಮಾನ್ ಖಾನ್, ನ್ಯಾಮತಿ ಲೋಕೇಶ್, ಸಾಸ್ವೆಹಳ್ಳಿ ಕೃಷ್ಣಮೂರ್ತಿ, ಶಿವನಗೌಡ, ಕೆ.ಎಲ್.ಹರೀಶ್, ರಾಘವೇಂದ್ರ ನಾಯ್ಕ್, ಜಯದೇವನಾಯ್ಕ್, ಕೋಣನತಲೆ ನಾಗಪ್ಪ, ಮಹಿಳಾ ಘಟಕದ ಆಶಾ, ಭಾರತಿಚಂದ್ರಶೇಖರ್, ನೇಮಿಚಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.



**ರಾಷ್ಟ್ರೀಯ ಪ್ರಕೃತಿ ವಿಕೋಪದ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಬಿಡಿಗಾಸು ಹಣ ಬಿಡುಗಡೆ ಮಾಡಿರುವುದಿಲ್ಲ, ಉದ್ಯೋಗ ಖಾತ್ರಿ ಯೋಜನೆಯನ್ನು 100 ದಿನದಿಂದ 150 ದಿನಕ್ಕೆ ಹೆಚ್ಚಳ ಮಾಡುವಂತೆ ಮನವಿ ಮಾಡಿದ್ದರೂ ಹೆಚ್ಚಳ ಮಾಡದೇ, ಜಿಎಸ್ಟಿ ತೆರಿಗೆ ಹಣವನ್ನು ನೀಡದೇ, ರೈತರ ಪ್ರಮುಖ ಬೇಡಿಕೆಗಳಿಗೆ ಕ್ಯಾರೇ ಎನ್ನದೇ, ರೈತರ ಸಾಲ ಮನ್ನಾಕ್ಕೂ ಮುಂದಾಗದೇ ದ್ವೇಷದ ರಾಜಕಾರಣ ಮಾಡುತ್ತಿದೆ.**

**-ಡಿ.ಜಿ.ಶಾಂತನಗೌಡ, ಶಾಸಕರು, ಹೊನ್ನಾಳಿ.**

**ಈಗಾಗಲೇ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ತಮ್ಮದೇ ದೂರದೃಷ್ಟಿ ಆಡಳಿತದ ಪರಿಕಲ್ಪನೆಯನ್ನು ಮುಖಂಡರೊಂದಿಗೆ ಚರ್ಚಿಸಿ ಹಲವಾರು ಯೋಜನೆಗಳ ರೂಪುರೇಷೆಗಳನ್ನು ಸಿದ್ಧಪಡಿಸಿಕೊಂಡಿರುವ ಚಿಂತನಾಶೀಲ ವ್ಯಕ್ತಿತ್ವ ಹೊಂದಿರುವ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಪಕ್ಷ ನಿಷ್ಠೆಯಿಂದ ಮತ ಹಾಕಿಸಿ ದೆಹಲಿಗೆ ಕಳಿಸಿಕೊಡಬೇಕು.**

**-ಹೆಚ್.ಬಿ. ಮಂಜಪ್ಪ, ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್**

## ಯಲವಟ್ಟಿ : ಸಂಭ್ರಮದ ರಥೋತ್ಸವ



ಮಲೇಬೆನ್ನೂರು, ಮಾ.31- ಯಲವಟ್ಟಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವವು ಭಾನುವಾರ ಬೆಳಗ್ಗೆ 7 ಗಂಟೆಗೆ ಜಿಗಳಿ ರಂಗನಾಥ ಸ್ವಾಮಿ ಜೊತೆಗೂಡಿ, ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು. ಸಂಜೆ ನಡೆದ ಸ್ವಾಮಿಯ ಮುಳ್ಳೋತ್ಸವದಲ್ಲೂ ಸಹ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಮುಳ್ಳು ತುಳಿದು ಭಕ್ತಿ ಸಮರ್ಪಿಸಿದರು. ಸಂಜೆ ಓಕುಳಿ ನಂತರ ಭೂತನ ಸೇವೆಯೊಂದಿಗೆ ರಥೋತ್ಸವಕ್ಕೆ ತೆರೆ ಎಳೆಲಾಯಿತು.

## ಕಚತೀವು ದ್ವೀಪ ಶ್ರೀಲಂಕಾಗೆ ಕೊಟ್ಟ ಕಾಂಗ್ರೆಸ್: ಮೋದಿ ಟೀಕೆ

**(1ನೇ ಪುಟದಿಂದ)** ಭಾವನೆ ಬಂದಿದೆ ಎಂದು ಹೇಳಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ, ಈ ಹಿಂದಿನ ಕಾಂಗ್ರೆಸ್ ಸರ್ಕಾರ ಕಚತೀವು ದ್ವೀಪವನ್ನು ಶ್ರೀಲಂಕಾಗೆ ಕೊಟ್ಟಿತ್ತು. ಇದರಿಂದಾಗಿ ಭಾರತದ ಕರಾವಳಿಯಿಂದ ಕೇವಲ 25 ಕಿ.ಮೀ. ದೂರ ಹೋಗುವ ತಮಿಳುನಾಡು ಬೆಸ್ತರು ಶ್ರೀಲಂಕಾದಿಂದ ಬಂಧನಕ್ಕೊಳಗಾಗುವಂತಾಗಿದೆ ಎಂದಿದ್ದಾರೆ.

1975ರವರೆಗೂ ಈ ದ್ವೀಪ ಭಾರತದ ಬಳಿ ಇತ್ತು. ತಮಿಳುನಾಡು ಬೆಸ್ತರು ಅಲ್ಲಿಗೆ ತೆರಳುತ್ತಿದ್ದರು. ಆದರೆ, ಆಗಿನ ಇಂದಿರಾ ಗಾಂಧಿ ಸರ್ಕಾರ ಲಂಕಾದ ಜೊತೆ ಒಪ್ಪಂದ ಮಾಡಿಕೊಂಡು, ಬಾರತೀಯರು ಈ ದ್ವೀಪಕ್ಕೆ ಹೋಗದಂತೆ ತಡೆಯಿತು ಎಂದವರು ಹೇಳಿದರು.

ಆದರೆ, ಡಿ.ಎಂ.ಕೆ. ಆಗಲೀ, ಕಾಂಗ್ರೆಸ್ ಆಗಲೀ ಈ ವಿಷಯವನ್ನು ಪ್ರಸ್ತಾಪಿಸಲಿಲ್ಲ. ಮೋದಿ ಸರ್ಕಾರ ಜನರ ಬಗ್ಗೆ ಹಾಗೂ ದೇಶದ ಬಗ್ಗೆ ಹೊಂದಿರುವ ಬದ್ಧತೆಯಿಂದ ಈ ವಿಷಯ ಪ್ರಸ್ತಾಪಿಸುತ್ತಿದೆ ಎಂದಿದ್ದಾರೆ.

1974ರಲ್ಲಿ ಇಂದಿರಾ ಗಾಂಧಿ ಸರ್ಕಾರ ಈ ಪ್ರದೇಶವನ್ನು ಶ್ರೀಲಂಕಾಗೆ ನೀಡಿತ್ತು ಎಂದು ತಮಿಳುನಾಡು ಬಿಜೆಪಿ ಅಧ್ಯಕ್ಷ ಕೆ. ಅಣ್ಣಾಮಲೈ ದಾಖಲಿಸಿದ್ದ ಮಾಹಿತಿ ಹಕ್ಕು ಅರ್ಜಿಗೆ ವಿವರ ನೀಡಲಾಗಿತ್ತು.

# ಕೇರಳದಲ್ಲೂ ಹೆಚ್ಚುತ್ತಿರುವ ತಾರಾ ರಾಜಕೀಯ

**(1ನೇ ಪುಟದಿಂದ)** ಬಿ. ಗಣೇಶ್ ಕುಮಾರ್, ಮಣಿ ಸಿ. ಕಪ್ಪನ್ ಹಾಗೂ ದಲೀಮಾ ಜೋಜೊ ಅವರು 2021ರ ಚುನಾವಣೆಯಲ್ಲಿ ವಿಧಾನಸಭೆಗೆ ಆಯ್ಕೆಯಾಗಿದ್ದರು.

ಕಳೆದ ದಶಕದಲ್ಲಿ ನಟರು ಚಿತ್ರರಂಗಕ್ಕೆ ಕಾಲಿಡುವುದು ಸಾಮಾನ್ಯವಾಗುತ್ತಿದೆ ಎಂದು ಕೇರಳದ ಚಲನಚಿತ್ರ ಉದ್ಯೋಗಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಬಿ. ಉನ್ನಿಕೃಷ್ಣನ್ ಹೇಳಿದ್ದಾರೆ. ಸುರೇಶ್ ಗೋಪಿ ಅವರು ಈ ಹಿಂದೆ ರಾಜ್ಯಸಭೆಗೆ ನಾಮಕರಣಗೊಂಡಿದ್ದರು. 2019 ರ ಲೋಕಸಭೆ ಹಾಗೂ 2021ರ ವಿಧಾನಸಭಾ ಚುನಾವಣೆ ಯಲ್ಲಿ ಸ್ಪರ್ಧಿಸಿದ್ದರಾದರೂ, ಗೆಲುವು ಕಂಡಿರಲಿಲ್ಲ. ದಶಕಗಳಿಂದ ಕೇರಳದಲ್ಲಿ ರಾಜಕೀಯ ಮುಂಚೂಣಿಗೆ ಬರಲು ಬಿಜೆಪಿ ತೀವ್ರ ಪ್ರಯತ್ನ ನಡೆಸುತ್ತಿದೆ. ಆದರೆ, ಹೆಚ್ಚಿನ ಯಶಸ್ಸು ಕಂಡಿಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತ್ರಿಸ್ಸೂರಿಗೆ ಎರಡು ಬಾರಿ ಭೇಟಿ ನೀಡಿ ಗೋಪಿ ಪರ ಅಭಿಯಾನ ನಡೆಸಿದ್ದಾರೆ.

ಸಿಪಿಐ (ಎಂ) ಪಕ್ಷದ ಮುಕೇಶ್ ಎದುರಾಳಿಯಾಗಿ ಕೊಲ್ಲಂ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಬಿಜೆಪಿಯ ಕೃಷ್ಣಕುಮಾರ್ ಅವರು ಕಿರುತೆರೆ ಹಾಗೂ ಚಲನಚಿತ್ರಗಳಲ್ಲಿ ಹೆಸರು ಮಾಡಿದ್ದಾರೆ. ಅವರ ನಾಲ್ವರು ಪುತ್ರಿಯರು ಡಿಜಿಟಲ್ ವೇದಿಕೆಗಳಲ್ಲಿ ಪ್ರಭಾವ ಬೀರುತ್ತಿದ್ದಾರೆ.

ನಟರಾಗಿದ್ದುಕೊಂಡು ರಾಜಕೀಯಕ್ಕೆ ಬಂದವರು ಎಂಬ ಹಣೆಪಟ್ಟಿ ಹಚ್ಚುವುದು ಸರಿಯಲ್ಲ. ಯಾವುದೇ ವೃತ್ತಿಯವರಾದರೂ ರಾಜಕೀಯಕ್ಕೆ ಬರಬಹುದು ಎಂದು ಕೃಷ್ಣಕುಮಾರ್ ಹೇಳುತ್ತಾರೆ. ಚಿತ್ರನಟರು ತಮ್ಮದೇ ಆದ ವರ್ಚಸ್ಸು ಹೊಂದಿರುತ್ತಾರೆ. ಆದರೆ, ಇದರಿಂದ ಕೇರಳದ ಜನರು ಪ್ರಬಾವಿತರಾಗುತ್ತಿಲ್ಲ ಎಂದು ಚಿತ್ರ ವಿಶ್ಲೇಷಕ ಆರ್. ಅರ್ಜುನ್ ಅಭಿಪ್ರಾಯ ಪಟ್ಟಿದ್ದಾರೆ.

ಚಲನಚಿತ್ರದ ಹಿನ್ನೆಲೆಯಿಂದ ಬಂದ ಕೆ.ಬಿ. ಗಣೇಶ್ ಕುಮಾರ್, ಮುಕೇಶ್ ಹಾಗೂ ಇನ್ನೋಸೆಂಟ್ ಅವರು ಯಶಸ್ಸು ಕಂಡಿದ್ದಾರೆ. ಮತ್ತೊಂದೆಡೆ ನಟರಾದ ಮುರಳಿ, ಧರ್ಮಜನ್ ಬೊಲ್ಗಾಟಿ ಹಾಗೂ ವೀಣಾ ನಾಯರ್ ಸೇರಿದಂತೆ ಹಲವರು ವಿಫಲವಾಗಿದ್ದಾರೆ ಎಂದು ಅರ್ಜುನ್ ತಿಳಿಸಿದ್ದಾರೆ.

## ಲೋಕಸಭಾ ಚುನಾವಣೆ, ಮತದಾನ ಜಾಗೃತಿಗೆ ಬೈಕ್ ರ್‍ಯಾಲಿ



ದಾವಣ ಗೆರೆ, ಮಾ.31- ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯ ತ್ , ಸ್ವೀಪ್ ಸಮಿತಿಯಿಂದ ಜಿಲ್ಲಾ ಪಂಚಾಯತ್ ಕಚೇರಿ ಬಳಿಯಿಂದ ಭಾನುವಾರ ಆಯೋಜಿಸಿದ್ದ ಮತದಾರರ ಜಾಗೃತಿ ಮೂಡಿಸುವ ಬೈಕ್ ರ್‍ಯಾಲಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್.ಬಿ ಇಟ್ನಾಳ್ ಚಾಲನೆ ನೀಡಿ ದರು. ಜಾಥಾವು ಜಿಲ್ಲಾ ಪಂಚಾಯತ್‌ನಿಂದ ಹೊರಟು, ಜಯದೇವ ಸರ್ಕಲ್, ಪಿ.ಬಿ.ರಸ್ತೆಯ ಮೂಲಕ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಅರುಣ ಸರ್ಕಲ್‌ನಲ್ಲಿ ಮುಕ್ತಾಯಗೊಂಡು ಮತದಾನ ಜಾಗೃತಿ ಮೂಡಿಸಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ, ಬಿಸಿಎಂ ಅಧಿಕಾರಿ ಗಾಯತ್ರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಮಲ್ಲಿಕಾರ್ಜುನ್ ಮಠದ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

## ಸಮಾಜ ಮತ್ತು ಧರ್ಮದ ವಿಚಾರದಲ್ಲಿ ಒಂದಾಗದಿದ್ದರೆ ಅಪಾಯ

**(1ನೇ ಪುಟದಿಂದ)** ಅಹಂಕಾರ, ಅಹಂ ಭಾವ ಹೆಚ್ಚಾಗಿದ್ದು, ಸಂಸ್ಕಾರ ಹೀನ ಬದುಕು ಸಾಗುತ್ತಿದೆ. ಮಕ್ಕಳಿಗೂ ದೀಕ್ಷಾ ಸಂಸ್ಕಾರ ನೀಡುವ ಅಗತ್ಯವಿದೆ ಎಂದು ಹೇಳಿದರು. ಯಾರಿಗೂ ಕೆಡುಕು ಬಯಸದೇ ಸಮಾಜವನ್ನು ಮಕ್ಕಳ ಭವಿಷ್ಯತ್ತಿಗಾಗಿ ಉತ್ತಮ ಬದುಕು ಕಟ್ಟಿಕೊಳ್ಳ ಬೇಕು. ಅಹಂಕಾರ ಬಿಟ್ಟು ಸಮಾಜದ ಉದ್ಧಾರಕ್ಕಾಗಿ ಚಿಂತನೆ ಮಾಡಬೇಕೆಂದು ಸಲಹೆ ನೀಡಿದರು.

ಸೊಸೈಟಿ ಅಧ್ಯಕ್ಷ ತ್ಯಾವಣಗಿ ವೀರಭದ್ರ ಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ನೂತನ ಕಟ್ಟಡಕ್ಕೆ ಚಾಲನೆ ನೀಡಿದರು. ಮಾಜಿ ಸಚಿವ ಮುರುಗೇಶ್ ನಿರಾಣಿ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸೊಸೈಟಿ ಉಪಾಧ್ಯಕ್ಷ ಪಂಚಾಕ್ಷರಯ್ಯ, ಎನ್.ಎಂ.ವೀರೇಂದ್ರ, ಆರ್.ಎಂ. ವೀರಯ್ಯ, ವೃಷಭೇಂದ್ರಸ್ವಾಮಿ, ಬಿ.ಎಂ. ರವಿ, ಸುಮನ ವಾಗೀಶ್ ಕಟಗಿಹಳ್ಳಿ ಮಠ, ಸಿ. ಚನ್ನಬಸವ ಶರ್ಮ, ಸಿ.ಎಂ. ತಾರಾ, ಎಸ್. ರೇಖಾ, ಕಾರ್ಯದರ್ಶಿ ನಾಗರಾಜಯ್ಯ ಐನಹಳ್ಳಿಮಠ ಮತ್ತಿತರರು ಉಪಸ್ಥಿತರಿದ್ದರು. ಮಲ್ಲಯ್ಯ ಸ್ವಾಮಿ ನಿರೂಪಿಸಿದರು. ನಿರ್ದೇಶಕ ಎಲ್. ಎಂ.ಆರ್. ಬಸವರಾಜಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು.

## ನಗರದಲ್ಲಿ ಇಂದು ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದ ವಾರ್ಷಿಕೋತ್ಸವ

ಬ್ರಾಹ್ಮಣ ಸಮಾಜದ ಮಹಿಳಾ ವಿಭಾಗದ ವಾರ್ಷಿಕೋತ್ಸವ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮವು ಇಂದು ಸಂಜೆ 5.30 ಕ್ಕೆ ವರ್ತುಲ ರಸ್ತೆಯಲ್ಲಿರುವ ಶ್ರೀ ಶಂಕರ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಮಹಿಳಾ ವಿಭಾಗದ ಶ್ರೀಮತಿ ಶ್ರೀಮತಿ ಅಡಿಗ ತಿಳಿಸಿದ್ದಾರೆ.

ಶಿಕ್ಷಕಿ ಶ್ರೀಮತಿ ಜ್ಯೋತಿ ಎನ್. ಉಪಾಧ್ಯಾಯ, ಮಹಿಳಾ ಉದ್ಯಮಿ ಶ್ಯಾಮಲಾ ಪ್ರಕಾಶ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಮಹಿಳಾ ವಿಭಾಗದ ಅಧ್ಯಕ್ಷರಾದ ನಳಿನಿ ಅಚ್ಯುತ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

## ಮ್ಯಾಚ್ ಫಿಕ್ಸಿಂಗ್‌ಗೆ ಕಚತೀವು ತೀರುಗೇಟು

**(1ನೇ ಪುಟದಿಂದ)** ನಡೆಸಲಾಗಿತ್ತು ಎಂದು ಪ್ರತ್ಯಾರೋಪ ಮಾಡಿದೆ. ರಾಮಲೀಲಾ ಮೈದಾನದಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡುವಾಗ ರಾಹುಲ್ ಗಾಂಧಿ ಮ್ಯಾಚ್ ಫಿಕ್ಸಿಂಗ್ ಆರೋಪ ಮಾಡಿದ್ದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲ, ಕೆಲವರು ಮ್ಯಾಚ್ ಫಿಕ್ಸಿಂಗ್ ಬಗ್ಗೆ ಮಾತನಾಡುತ್ತಿದ್ದಾರೆ. 1974ರಲ್ಲಿ ಆಗಿನ ಇಂದಿರಾ ಗಾಂಧಿ ಸರ್ಕಾರ ಕಚತೀವು ದ್ವೀಪವನ್ನು ಶ್ರೀಲಂಕಾಗೆ ನೀಡುವ ಮೂಲಕ ಕಾಂಗ್ರೆಸ್‌ನ ಮೊದಲ ಕುಟುಂಬಕ್ಕೆ ಲಾಭ ಮಾಡಿಕೊಟ್ಟಿತ್ತು ಎಂದು ಆರೋಪಿಸಿದರು.

ಆದರೆ, ಈ ದ್ವೀಪ ನೀಡಿದ ಕಾರಣಕ್ಕಾಗಿ ದೇಶದ ಹಿತ ಹಾಗೂ ತಮಿಳುನಾಡಿನ ಜನತೆಯ ಹಿತಕ್ಕೆ ಧಕ್ಕೆಯಾಗಿತ್ತು ಎಂದವರು ಟೀಕಿಸಿದರು.


## ಐದನೇ ವರ್ಷದ ಪುಣ್ಯಸ್ಮರಣೆ



ಜನನ : 06.08.1952

ಮರಣ : 01.04.2019

**ದಿ|| ಸಿ. ದ್ಯಾಮಲಾಂಬಿಕ** (ನೇತ್ರದಾನಿ)

ಇಂದಿಗೆ ನೀವು ನಮ್ಮನ್ನಗಲಿ ಐದು ವರ್ಷಗಳಾದವು.

ಸದಾ ತಮ್ಮ ಸ್ಮರಣೆಯಲ್ಲಿರುವ

**ಕೆ. ತಿಪ್ಪೇಸ್ವಾಮಿ, ನಿವೃತ್ತ ಪಿ.ಎಸ್.ಐ.**
**ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು,**
**ತೋಟದ ಕಾಡಪ್ಪನವರ ವಂಶಸ್ಥರು**
**ಕೊಳಾಳು, ಹೊಳಲ್ಕೆರೆ ತಾಲ್ಲೂಕು ಹಾಗೂ ಬಂಧು-ಮಿತ್ರರು.**

## ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀ ಬಸವರಾಜ ಚಿಗಟೇರಿ** **ಶ್ರೀಮತಿ ಗಿರಿಜ ಬಸವರಾಜ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.

ಸದಾ ನಿಮ್ಮ ನೆನಪಿನಲ್ಲಿರುವ...

**ಶ್ರೀಮತಿ ವಿಜಯ ಕೊಟ್ರೇಶ**
**ಶ್ರೀಮತಿ ಗಾಯತ್ರಿ ಚಂದ್ರಶೇಖರ**
**ಗೌಡರು, ಪಟ್ಟಣದ ಚಿಗಟೇರಿ ವಂಶಸ್ಥರು**


## ಫಿಕ್ಸಿಂಗ್ ಯತ್ನ: ರಾಹುಲ್

**(1ನೇ ಪುಟದಿಂದ)** ಪ್ರಜಾಪ್ರಭುತ್ವ ರಕ್ಷಿಸಿ ಸಮಾವೇಶದಲ್ಲಿ ಮಾತನಾಡಿದ ಅವರು, ಅಂಪೈರ್‌ಗಳ ಮೇಲೆ ಒತ್ತಡ ಹೇರಿದಾಗ ಹಾಗೂ ಆಟಗಾರರನ್ನು ಖರೀದಿಸಿದಾಗ ಕ್ರಿಕೆಟ್‌ನಲ್ಲಿ ಮ್ಯಾಚ್ ಫಿಕ್ಸಿಂಗ್ ಆಗುತ್ತದೆ. ಅದೇ ಪರಿಸ್ಥಿತಿ ರಾಜಕೀಯದಲ್ಲಿ ಆಗುತ್ತಿದೆ ಎಂದರು. ಚುನಾವಣೆಗೆ ಮುಂಚೆ ವಿಪಕ್ಷದ ಇಬ್ಬರು ನಾಯಕರನ್ನು ಬಂಧಿಸಲಾಗಿದೆ. ನರೇಂದ್ರ ಮೋದಿ ಮ್ಯಾಚ್ ಫಿಕ್ಸಿಂಗ್‌ಗೆ ಪ್ರಯತ್ನ ನಡೆಸಿದ್ದಾರೆ ಎಂದು ರಾಹುಲ್ ಗಾಂಧಿ ಆರೋಪಿಸಿದರು. ಬಿಜೆಪಿ 400ಕ್ಕೂ ಹೆಚ್ಚು ಸೀಟುಗಳಲ್ಲಿ ಗೆಲ್ಲುವುದಾಗಿ ಹೇಳುತ್ತಿದೆ. ಮತಯಂತ್ರ, ಮ್ಯಾಚ್ ಫಿಕ್ಸಿಂಗ್, ವಿಪಕ್ಷಗಳ ಮೇಲಿನ ಒತ್ತಡ ಹಾಗೂ ಮಾಧ್ಯಮಗಳ ಖರೀದಿ ಇಲ್ಲದೇ ಅವರು 180 ಸ್ಥಾನ ಗೆಲ್ಲಲೂ ಸಾಧ್ಯವಾಗದು ಎಂದು ಹೇಳಿದರು.

### ದುರ್ಗದ ಇಟಗಿ ಗಾಯತ್ರಿ ನಿಧನ



ದಾವಣಗೆ ರೆ ಎಂ. ಸಿ.ಸಿ. ಎ ಬ್ಲಾಕ್ ನಿವಾಸಿ ದಿ. ದುರ್ಗದ ಇಟಗಿ ಮುರುಗೇಶಪ್ಪ ಇವರ ಧರ್ಮಪತ್ನಿ ಶ್ರೀಮತಿ ಗಾಯತ್ರಿ (69) ಇವರು ದಿ ನಾಂಕ 31.03.2024ರ ಭಾನುವಾ ರ ರಾತ್ರಿ 11.30ಕ್ಕೆ ನಿಧನರಾ ದ ರೆಂದು ತಿಳಿಸಲು ವಿಷಾ ದಿ ಸುತ್ತೇವೆ. ಇಬ್ಬರು ಪುತ್ರರು ಹಾಗೂ ಅಪಾರ ಬಂ ಧು -ಬಳಗವನ್ನು ಅಗಲಿರುವ ಮೃತರ ಅಂ ತ್ಯಕ್ರಿಯೆಯು ದಿನಾಂಕ 01.04.2024ರ ಸೋಮವಾರ ಮಧ್ಯಾಹ್ನ 2 ಕ್ಕೆ ನಗರದ ಬೂದಿಹಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# 400 ಕ್ಕೂ ಹೆಚ್ಚು ಅಭ್ಯರ್ಥಿಗಳ ಕಣಕ್ಕಿಳಿಸಲು ಸಿಂಗ್ ಗುರಿ

ಅಗರ್ ಮಾಳ್ವ, ಮಾ. 31 - ಮಧ್ಯಪ್ರದೇಶದ ರಾಜಘಡ್ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಮತಯಂತ್ರದ ಬದಲು ಮತಪತ್ರ ಬಳಸುವಂತಾಗಲು 400ಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಪ್ರಯತ್ನದಲ್ಲಿರುವುದಾಗಿ ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಹೇಳಿದ್ದಾರೆ. ಮತಯಂತ್ರಗಳಿಂದ ನೋಟಾ ಸೇರಿದಂತೆ ಗರಿಷ್ಠ 384 ಅಭ್ಯರ್ಥಿಗಳನ್ನು ಮಾತ್ರ ನಿರ್ವಹಿಸಲು ಸಾಧ್ಯ. ಅದಕ್ಕೂ ಹೆಚ್ಚಿನ ಅಭ್ಯರ್ಥಿಗಳು ಕಣದಲ್ಲಿದ್ದರೆ ಮತಪತ್ರ ಬಳಸುವುದು ಅನಿವಾರ್ಯ ವಾಗುತ್ತದೆ. ಈ ಬಗ್ಗೆ ಸಮಾವೇಶವೊಂದ ರಲ್ಲಿ ಮಾತನಾಡಿರುವ ಸಿಂಗ್, 400ಕ್ಕೂ ಹೆಚ್ಚು ಅಭ್ಯರ್ಥಿಗಳಿದ್ದರೆ ಮತಪತ್ರಗಳನ್ನು ಬಳಸಬೇಕಾಗುತ್ತದೆ. ನಾನು ಈ ದಿಸೆಯಲ್ಲಿ ಪ್ರಯತ್ನ ನಡೆಸಿದ್ದೇನೆ ಎಂದಿದ್ದಾರೆ. ಸಾಮಾನ್ಯ ಅಭ್ಯರ್ಥಿಗಳು ಕಣಕ್ಕಿಳಿಯಲು 25 ಸಾವಿರ ರೂ. ಭದ್ರತಾ ಠೇವಣಿ ನೀಡಬೇಕು. ಮೀಸಲು ವರ್ಗದ ಅಭ್ಯರ್ಥಿಗಳು 12,500 ರೂ.ಗಳ ಭದ್ರತಾ ಠೇವಣಿ ನೀಡಬೇಕು. ಏನಾಗುತ್ತದೋ ನೋಡೋಣ ಎಂದು ಸಿಂಗ್ ತಿಳಿಸಿದ್ದಾರೆ. ಛತ್ತೀಸ್‌ಘಡದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ಸಹ ಇದೇ ರೀತಿಯ ಹೇಳಿಕೆ ನೀಡಿದ್ದರು.

**ಮತಪತ್ರ ಬಳಕೆ ಅನಿವಾರ್ಯಗೊಳಿಸಲು ಈ ಕ್ರಮ**

## ವಿಪಕ್ಷಗಳಿಂದ ಭ್ರಷ್ಟಾಚಾರ ರಕ್ಷಿಸುವ ಯತ್ನ : ಮೋದಿ

ಮೀರತ್, ಮಾ. 31 – ಪ್ರತಿಪಕ್ಷಗಳ ಒಕ್ಕೂಟವಾದ ಐ.ಎನ್.ಡಿ.ಐ.ಎ. ನಾಯಕರು ಭ್ರಷ್ಟಾಚಾರ ರಕ್ಷಿಸುವ ಯತ್ನದಲ್ಲಿದ್ದಾರೆ. ವಿಪಕ್ಷದ ನಾಯಕರು ತಮ್ಮ ಮೇಲೆ ದಾಳಿ ನಡೆಸಿದರೂ, ಭ್ರಷ್ಟಾಚಾರದ ವಿರುದ್ಧದ ಹೋರಾಟ ನಿಲ್ಲಿಸುವುದಿಲ್ಲ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದಲ್ಲಿ ಆಯೋಜಿಸಲಾಗಿದ್ದ ಮೊದಲ ಸಮಾವೇಶ ದಲ್ಲಿ ಮಾತನಾಡಿದ ಪ್ರಧಾನಿ, ನಾನು ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿದ್ದೇನೆ. ಮತ್ತೊಂದೆಡೆ ವಿಪಕ್ಷ ನಾಯಕರು ಐಎನ್‌ಡಿಐಎ ಒಕ್ಕೂಟ ರಚಿಸಿಕೊಂಡಿದ್ದಾರೆ. ಅವರು ನನ್ನ ಬೆದರಿಸುವ ಪ್ರಯತ್ನ ನಡೆಸಿದ್ದಾರೆ. ಆದರೆ, ನಾನು ಭಾರತವನ್ನು ಭ್ರಷ್ಟಾಚಾರದಿಂದ ರಕ್ಷಿಸಲು ಮುಂದಾಗಿದ್ದೇನೆ ಎಂದರು. ಭ್ರಷ್ಟಾಚಾರದ ವಿರುದ್ಧ ನಾನು ಕ್ರಮ ತೆಗೆದುಕೊಳ್ಳುತ್ತಿರುವುದರಿಂದ ಅವರು ವಿಚಲಿತರಾಗಿದ್ದಾರೆ. ಭ್ರಷ್ಟಾಚಾರ ತೊಲಗಲಿ ಎಂಬುದು ನನ್ನ ಮಂತ್ರವಾಗಿದ್ದರೆ, ಭ್ರಷ್ಟಾಚಾರ ಉಳಿಯಲಿ ಎಂಬುದು ವಿಪಕ್ಷಗಳ ಮಂತ್ರ ಎಂದು ತರಾಟೆಗೆ ತೆಗೆದುಕೊಂಡರು.

ನಾನು ದೇಶವನ್ನು ಭ್ರಷ್ಟಾಚಾರದಿಂದ ರಕ್ಷಿಸಲು ಹೋರಾಟ ನಡೆಸುತ್ತಿದ್ದೇನೆ. ಇದರಿಂದಾಗಿ ಅವರು ಕಂಬಿಗಳ ಹಿಂದಿದಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲೂ ಅವರಿಗೆ ಜಾಮೀನು ದೊರೆಯುತ್ತಿಲ್ಲ ಎಂದೂ ಪ್ರಧಾನಿ ಹೇಳಿದರು.

# ಪ್ರಜಾಪ್ರಭುತ್ವ - ಸಂವಿಧಾನ ರಕ್ಷಣೆಗೆ ಒಂದಾಗಬೇಕು



ರಾಮಲೀಲಾ ಮೈದಾನದಲ್ಲಿ ಐ.ಎನ್.ಡಿ.ಐ.ಎ. ನಾಯಕರ ಕರೆ

ನವದೆಹಲಿ, ಮಾ. 31 – ಬಿಜೆಪಿಯನ್ನು ಸೋಲಿಸಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ರಕ್ಷಿಸಲು ಒಂದಾಗಬೇಕು ಎಂದು ಐ.ಎನ್.ಡಿ.ಐ.ಎ. ಮೈತ್ರಿಕೂಟದ ನಾಯಕರು ದೆಹಲಿಯ ರಾಮ್ ಲೀಲಾ ಮೈದಾನದಲ್ಲಿ ಕರೆ ನೀಡಿದ್ದಾರೆ.

ರಾಮಲೀಲಾ ಮೈದಾನದಲ್ಲಿ ಆಯೋಜಿಸಲಾಗಿದ್ದ ಪ್ರಜಾಪ್ರಭುತ್ವ ರಕ್ಷಿಸಿ ಸಮಾವೇಶದಲ್ಲಿ ಮಾತನಾಡಿದ ನಾಯಕರು, ಕೇಂದ್ರ ಸರ್ಕಾರದ ಸರ್ವಾಧಿಕಾರಿ ಕ್ರಮಗಳಿಂದಾಗಿ ಲೋಕಸಭಾ ಚುನಾವಣೆಯಲ್ಲಿ ಸಮಾನ ಅವಕಾಶ ದೊರೆಯುತ್ತಿಲ್ಲ ಎಂದು ಆರೋಪಿಸಿದರು.

ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್ ಹಾಗೂ ಜಾರ್ಖಂಡ್ ಮಾಜಿ ಸಿಎಂ ಹೇಮಂತ್ ಸೋರೇನ್ ಬಂಧನದ ನಂತರ ಮೊದಲ ಬಾರಿಗೆ 18 ಪ್ರಮುಖ ಪಕ್ಷಗಳ ನಾಯಕರು ಸಮಾವೇಶದಲ್ಲಿ ಜೊತೆಯಾಗಿ ಭಾಗವಹಿಸಿದ್ದರು. ಪ್ರತಿಪಕ್ಷಗಳ ನಾಯಕರ ಬಂಧನ ಹಾಗೂ ರಾಜಕೀಯ ಪಕ್ಷಗಳಿಗೆ ಆದಾಯ ತೆರಿಗೆ ನೋಟಿಸ್ ಕಳಿಸಿರುವುದು ನಾಯಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ 'ಮ್ಯಾಚ್ ಫಿಕ್ಸಿಂಗ್' ಮಾಡುತ್ತಿದ್ದಾರೆ. ಬಿಜೆಪಿ ಈ ರೀತಿ ಚುನಾವಣೆಯಲ್ಲಿ ಗೆದ್ದರೆ ಹಾಗೂ ಸಂವಿಧಾನ ಬದಲಿಸಿದರೆ ಇಡೀ ದೇಶ ನಾಶವಾಗುತ್ತದೆ ಎಂದಿದ್ದಾರೆ.

ಕೇಜ್ರಿವಾಲ್ ಅವರ ಪತ್ನಿ ಸುನಿತಾ ಕೇಜ್ರಿವಾಲ್ ಹಾಗೂ ಹೇಮಂತ್ ಸೋರೇನ್ ಪತ್ನಿ ಕಲ್ಪನಾ ಸೋರೇನ್ ಅವರು ಸಮಾವೇಶದಲ್ಲಿ ಮಾತನಾಡಿ, ತಮ್ಮ ಪತಿಯರನ್ನು ಭ್ರಷ್ಟಾಚಾರ ಪ್ರಕರಣಗಳಲ್ಲಿ ಬಂಧಿಸಿರುವ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಆರ್.ಎಸ್.ಎಸ್. - ಬಿ.ಜೆ.ಪಿ.ಗಳು ವಿಷವಿದ್ದಂತೆ. ಈ ವಿಷದಿಂದ ದೇಶ ನಾಶವಾಗುತ್ತಿದೆ. ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ ಪ್ರತಿಪಕ್ಷಗಳು ಒಂದಾಗಿ ಆಡಳಿತಾರೂಢ ಪಕ್ಷವನ್ನು ಪರಾಭ ವಗೊಳಿಸಬೇಕು ಎಂದು ಕರೆ ನೀಡಿದರು.

ಈ ಚುನಾವಣೆಯಲ್ಲಿ ಸಮಾನ ಅವಕಾಶ ಸಿಗುತ್ತಿಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೈದಾನದಲ್ಲಿ ಗುಂಡಿ ತೆಗೆದಿದ್ದಾರೆ, ಅಲ್ಲಿ ಕ್ರಿಕೆಟ್ ಆಡುವಂತೆ ಪ್ರತಿಪಕ್ಷಗಳಿಗೆ ಕೇಳುತ್ತಿದ್ದಾರೆ ಎಂದರು.

ತಮಿಳುನಾಡು ಮುಖ್ಯಮಂತ್ರಿ ಹಾಗೂ ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಮಾತನಾಡಿ, ಪ್ರತಿಪಕ್ಷಗಳ ಒಗ್ಗಟ್ಟಿನಿಂದ ಮಾತ್ರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೋಲಿಸಲು ಹಾಗೂ ಫ್ಯಾಸಿಸ್ಟ್ ಬಿಜೆಪಿಯನ್ನು ಸೋಲಿಸಲು ಸಾಧ್ಯ ಎಂದರು.

ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ, ಎಎಪಿ ನಾಯಕ ಹಾಗೂ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ವಿಪಕ್ಷ ನಾಯಕರಾದ ಶರದ್ ಪವಾರ್, ಅಖಿಲೇಶ್ ಯಾದವ್, ಉದ್ಧವ್ ಠಾಕ್ರೆ, ಫಾರೂಕ್ ಅಬ್ದುಲ್ಲಾ, ಸೀತಾರಾಮ್ ಯೆಚೂರಿ, ಡಿ. ರಾಜಾ, ದೀಪಂಕರ್ ಭಟ್ಟಾಚಾರ್ಯ ಹಾಗೂ ಡೆರೆಕ್ ಒಬ್ರೀನ್ ಸಹ ಸಮಾವೇಶದಲ್ಲಿ ಉಪಸ್ಥಿತರಿದ್ದರು.

## ರಾಮಲೀಲಾ ಮೈದಾನದಲ್ಲಿ ಭ್ರಷ್ಟಾಚಾರ ಮುಚ್ಚಿಡುವ ಸಮಾವೇಶ : ಬಿಜೆಪಿ


ನವದೆಹಲಿ, ಮಾ. 31 - ದೆಹಲಿಯ ರಾಮಲೀಲಾ ಮೈದಾನದಲ್ಲಿ ಐ.ಎನ್.ಡಿ.ಐ.ಎ. ಮೈತ್ರಿಕೂಟ ನಡೆಸುತ್ತಿರುವ ಸಮಾವೇಶ ಪ್ರಜಾಪ್ರಭುತ್ವ ರಕ್ಷಿಸುವ ಉದ್ದೇಶದ್ದಲ್ಲ. ಕುಟುಂಬ ರಕ್ಷಿಸುವ ಹಾಗೂ ಭ್ರಷ್ಟಾಚಾರ ಮುಚ್ಚಿಡುವ ಸಮಾವೇಶ ಎಂದು ಬಿಜೆಪಿ ಟೀಕಿಸಿದೆ.

ಕಾಂಗ್ರೆಸ್, ಡಿ.ಎಂ.ಕೆ. ಹಾಗೂ ಆರ್.ಜೆ.ಡಿ. ಸೇರಿದಂತೆ ಹಲವು ನಾಯಕರ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳು 2014ಕ್ಕೂ ಹಳೆಯವಾಗಿವೆ ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಹೇಳಿದ್ದಾರೆ.

ರಾಮಲೀಲಾ ಮೈದಾನದಲ್ಲಿ ಒಂದು ಕಾಲದಲ್ಲಿ ಅಣ್ಣಾ ಹಜಾರೆ ನೇತೃತ್ವದಲ್ಲಿ ಭ್ರಷ್ಟಾಚಾರ ವಿರೋಧಿ ಅಭಿಯಾನ ನಡೆದಿತ್ತು. ಈಗ ಭ್ರಷ್ಟಾಚಾರದಲ್ಲಿರುವವರನ್ನು ರಕ್ಷಿಸುವ ಸಮಾವೇಶ ನಡೆದಿದೆ ಎಂದು ತ್ರಿವೇದಿ ಲೇವಡಿ ಮಾಡಿದ್ದಾರೆ.

ಒಂದು ಕಾಲದಲ್ಲಿ ಕಳ್ಳರು ಹಾಗೂ ವಂಚಕರು ಎಂದು ಇತರರನ್ನು ಟೀಕಿಸಿದವರು, ಈಗ ಅವರ ಜೊತೆಗೇ ಕೈ ಜೋಡಿಸಿದ್ದಾರೆ ಎಂದೂ ಅವರು ಹೇಳಿದರು. ಆಮ್ ಆದ್ಮಿ ಪಾರ್ಟಿ ಹಾಗೂ ಇತರೆ ಪಕ್ಷಗಳನ್ನು ಉದ್ದೇಶಿಸಿ ಅವರು ಈ ಮಾತನಾಡಿದ್ದಾರೆ.

## ಕುಂಬಳೂರಿನಲ್ಲಿ 4 ರಂದು ಆಂಜನೇಯ ಸ್ವಾಮಿ ರಥೋತ್ಸವ



ಹೊನ್ನಾಳಿ, ಮಾ. 31 - ತಾಲ್ಲೂಕಿನ ಕುಂದೂರು ಗ್ರಾಮದ ಮೇಜರ್ ಮುಜರಾಯಿ ಇಲಾಖೆಯ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ ಇದೇ ದಿನಾಂಕ 4ರ ಗುರುವಾರ ಬೆಳಗ್ಗೆ 11.45ರಿಂದ ಮಧ್ಯಾಹ್ನ 12.45ರವರೆಗೆ ಜರುಗುವುದು.

ದಿನಾಂಕ 5ರ ಶುಕ್ರವಾರ ಬೆಳಗಿನ ಜಾವ 4ಕ್ಕೆ ಶ್ರೀ ಸ್ವಾಮಿಯ ಮಹಾ ರಥೋತ್ಸವ, ಮಧ್ಯಾಹ್ನ 3.30ರಿಂದ ಸಂಜೆ 6.30ರವರೆಗೆ ಸ್ವಾಮಿಯ ಮುಳ್ಳೋತ್ಸವ, ಕಾರಣಿಕ ಮಹೋತ್ಸವ, ದಿನಾಂಕ 6ರ ಶನಿವಾರ ಬೆಳಗ್ಗೆ 10.30 ಮತ್ತು ರಾತ್ರಿ 8ಕ್ಕೆ ಓಕುಳಿ, ಅಡ್ಡಪಲ್ಲಕ್ಕಿ ಉತ್ಸವ ಕಾರ್ಯಕ್ರಮಗಳು ನೆರವೇರಲಿವೆ ಎಂದು ದೇವಸ್ಥಾನ ಸಮಿತಿಯ ಅಧ್ಯಕ್ಷ ಸಿ.ಕೆ. ಶೇಖರಪ್ಪ ತಿಳಿಸಿದ್ದಾರೆ.

ರಥೋತ್ಸವಕ್ಕೆ ಮೊದಲು ಸಾಂಪ್ರದಾಯಿಕವಾಗಿ ಕಂಕಣ ಧಾರಣೆ, ದೂಳಿ ಉತ್ಸವ, ನಾಗ ಸರ್ಪೋತ್ಸವ, ಜಿಗರಿ ವಾಹನೋತ್ಸವ, ಗಜ (ಆನೆ) ವಾಹನ ಅಂಬಾರಿ ಉತ್ಸವ ಇತ್ಯಾದಿ ಆಚರಣೆಗಳನ್ನು ಪಾರಂಪರಿಕ ಶ್ರದ್ಧಾ-ಭಕ್ತಿಗಳಿಂದ ನೆರವೇರಿಸಲಾಗುವುದು ಎಂದು ಅವರು ವಿವರಿಸಿದರು.

ಗ್ರಾಮದ ಮಾರುತಿ ಯುವಕ ಸಂಘದ ದಾಸೋಹ ಸಮಿತಿ ವತಿಯಿಂದ ಮತ್ತು ಕುಂದೂರು ಗ್ರಾಮಸ್ಥರು ಹಾಗೂ ಸುತ್ತ-ಮುತ್ತಲಿನ ಗ್ರಾಮಗಳ ಸದ್ಭಕ್ತ ವೃಂದದವರಿಂದ ಅನ್ನ ದಾಸೋಹ ಸೇವೆ ಇರುತ್ತದೆ. ದಿನಾಂಕ 6 ಮತ್ತು 7ರಂದು ಬಯಲು ಜಂಗಿ ಕುಸ್ತಿಗಳು ನಡೆಯಲಿವೆ.

## ಕಾಂಗ್ರೆಸ್‌ನಿಂದ ದಲಿತ ಸಮುದಾಯಕ್ಕೆ ಅನ್ಯಾಯ

ದಾವಣಗೆರೆ, ಮಾ.31- ದಲಿತ ಸಮುದಾಯವನ್ನು ಕೇವಲ ಮತ ಬ್ಯಾಂಕ್ ಆಗಿ ಬಳಸಿಕೊಂಡಿರುವ ಕಾಂಗ್ರೆಸ್, ದಲಿತ ಸಮುದಾಯವನ್ನು ವಂಚಿಸುತ್ತಲೇ ಬಂದಿದೆ ಎಂದು ಜಿಲ್ಲಾ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಹನುಮಂತ ನಾಯ್ಕ ಆರೋಪಿಸಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ದಲಿತ ವಿರೋಧಿ ಎಂದು ಆರೋಪಿಸಿದರು.

ಮಾಜಿ ಪ್ರಧಾನಿ ನೆಹರೂ ಅವರು ಮೀಸಲಾತಿಯನ್ನು ವಿರೋಧಿಸಿದ್ದರು. ಅಂಬೇಡ್ಕರ್ ಅವರನ್ನು ಎರಡು ಬಾರಿ ಸೋಲಿಸಿ, ಅವರ ಎದುರು ಗೆದ್ದವರಿಗೆ ಪದ್ಮಪ್ರಶಸ್ತಿ ನೀಡಿ ಗೌರವಿಸಿದೆ. ಇದು ಕಾಂಗ್ರೆಸ್ ದಲಿತ ವಿರೋಧಿ ಎನ್ನುವುದಕ್ಕೆ ಸ್ಪಷ್ಟ ನಿದರ್ಶನ ಎಂದರು.

ಬಿಜೆಪಿ ಮುಖಂಡ ಆಲೂರು ನಿಂಗರಾಜ್ ಮಾತನಾಡಿ, ಹಿಂದಿನ ಬಿಜೆಪಿ ರಾಜ್ಯ ಸರ್ಕಾರ ಎಸ್ಸಿ ಮೀಸಲಾತಿಯನ್ನು ಶೇ.15ರಿಂದ 17ಕ್ಕೆ ಹಾಗೂ ಎಸ್ಟಿ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಹೆಚ್ಚಿಸಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಹೆಚ್ಚಿಸಿರುವ ಮೀಸಲಾತಿಯನ್ನು ನೀಡದೇ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಬಿ.ಎಂ. ಸತೀಶ್, ಬಿ.ಟಿ. ಸಿದ್ದಪ್ಪ, ಶಾಮನೂರು ರಾಜು, ರವಿ ನಾಯ್ಕ, ಬಿ. ವಿಠ್ಠಲ್. ಕಬ್ಬಳ್ಳಿ ಪರಸಪ್ಪ, ದಂಡಪಾಣಿ, ಶಿವಾನಂದ್ ಇದ್ದರು.

# ಎಲ್ಲರ ಮನೇಲೂ ಹೆಣ್ಮಕ್ಳೇ ಅಡುಗೆ ಮಾಡೋದು

### ಪತ್ನಿ ಪರ ನಗರದಲ್ಲಿ ಪ್ರಚಾರ ಕಾರ್ಯಕ್ಕೆ ಸಿದ್ದೇಶ್ವರ, ಮಾಜಿ ಸಚಿವ ನಿರಾಣಿ ಸಾಥ್



ದಾವಣಗೆರೆ, ಮಾ.31- ನಮ್ಮ ಮನೆಯಲ್ಲೂ, ನಿಮ್ಮ ಮನೆಯಲ್ಲೂ, ಎಲ್ಲರ ಮನೆಯಲ್ಲೂ ಹೆಣ್ಣು ಮಕ್ಕಳೇ ಅಡುಗೆ ಮಾಡುವುದು. ಹಾಗೆಂದ ಮಾತ್ರಕ್ಕೆ ಮಹಿಳೆ ಅಡುಗೆ ಮಾಡುವುದಕ್ಕೆ ಮಾತ್ರ ಲಾಯಕ್ಕು ಅಂದರೆ ಹೇಗೆ. ಮಹಿಳೆಯರು ರಾಕೇಟು ಉಡಾವಣೆನೂ ಮಾಡುತ್ತಾರೆ, ಆಕಾಶದಲ್ಲೂ ಹಾರಾಡ್ತಾರೆ. ಐಎಎಸ್, ಐಪಿಎಸ್ ಕೂಡ ಆಗ್ತಾರೆ. ನಮ್ಮ ಎಸ್ಪಿ ಅವರು ಕೂಡ ಒಬ್ಬ ಮಹಿಳೆ ಎನ್ನುವ ಮೂಲಕ ಶಾಮನೂರು ಶಿವಶಂಕರಪ್ಪ ಹೇಳಿಕೆಗೆ ಸಂಸದ ಜಿ.ಎಂ.ಸಿದ್ದೇಶ್ವರ ತಿರುಗೇಟು ನೀಡಿದರು.

ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪರ ಭಾನುವಾರ ಮತ ಬೇಟೆ ಮಾಡಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳು ಜನರನ್ನು ಮರಳು ಮಾಡುವ ಗ್ಯಾರಂಟಿಗಳು. ಮನೆಯಲ್ಲಿ ಗಂಡ ನಿಂದ ಕಿತ್ತು, ಹೆಂಡ್ತಿಗೆ ಕೊಡುವ ಗ್ಯಾರಂಟಿ ಸ್ಕೀಂ. ಕಾಂಗ್ರೆಸ್ ಸರ್ಕಾರ ಕೇವಲ ಗ್ಯಾರಂಟಿಯನ್ನು ಮುಂದಿಟ್ಟುಕೊಂಡು ಮತ ಕೇಳುತ್ತಿದೆ. ಬಿಜೆಪಿ ಅಭಿವೃದ್ಧಿ, ದೂರದೃಷ್ಟಿ, ದೇಶದ ಭದ್ರತೆ, ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಹೆಸರಿನಲ್ಲಿ ಚುನಾವಣೆ ಮಾಡುತ್ತಿದ್ದೇವೆ. ದೇಶದ ಅಭಿವೃದ್ಧಿ ದೃಷ್ಟಿಯಿಂದ ಮೂರನೇ ಬಾರಿಗೆ ನರೇಂದ್ರ ಮೋದಿ ಅವರನ್ನು ಪ್ರಧಾನಿಯನ್ನಾಗಿ ಮಾಡಲು ಶ್ರೀಮತಿ ಗಾಯಿತ್ರಿ ಸಿದ್ದೇಶ್ವರ ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಬಿಐಇಟಿ ರಸ್ತೆಯ ವಸಂತ ಬೆಣ್ಣೆದೋಸೆ ಹೋಟೆಲ್, ಇಂಡಿಯನ್ ಕಾಫಿ ಬಾರ್, ಹೈಸ್ಕೂಲ್ ಮೈದಾನ, ಪಿ.ಬಿ. ರಸ್ತೆಯ ಹೂವಿನ ಮಾರುಕಟ್ಟೆ, ಜಗಳೂರು ವಿಧಾನಸಭಾ ಕ್ಷೇತ್ರ ಸೇರಿದಂತೆ ವಿವಿಧೆಡೆ ಗಾಯತ್ರಿ ಪರ ಮತ ಯಾಚನೆ ಮಾಡಿದರು.

ಮಾಜಿ ಸಚಿವ ಮುರುಗೇಶ್ ನಿರಾಣಿ, ದೂಡಾ ಮಾಜಿ ಅಧ್ಯಕ್ಷರಾದ ಯಶವಂತರಾವ್ ಜಾಧವ್, ದೇವರಮನೆ ಶಿವಕುಮಾರ್, ಮುಖಂಡರಾದ ಜಯಪ್ರಕಾಶ್ ಕೊಂಡಜ್ಜಿ, ಮುರುಗೇಶ್ ಆರಾಧ್ಯ, ಕೋಳೇನಹಳ್ಳಿ ಸತೀಶ್ ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಜೊತೆಯಲ್ಲಿದ್ದರು.

## ಬೆಳ್ಳೂಡಿ ಕನಕ ಗುರುಪೀಠಕ್ಕೆ ಭೇಟಿ ನೀಡಿದ ಗಾಯತ್ರಿ ಸಿದ್ದೇಶ್ವರ



ದಾವಣಗೆರೆ, ಮಾ.31- ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಮತ್ತು ಸಂಸದ ಜಿ.ಎಂ ಸಿದ್ದೇಶ್ವರ ಹರಿಹರ ತಾಲ್ಲೂಕಿನ ಬೆಳ್ಳೂಡಿ ಕನಕ ಗುರು ಪೀಠಕ್ಕೆ ಭೇಟಿ ನೀಡಿ, ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಅವರಿಗೆ ಗೌರವ ಸಲ್ಲಿಸಿ, ಆಶೀರ್ವಾದ ಪಡೆದರು. ಮಾಜಿ ಸಚಿವ ಮುರುಗೇಶ್ ನಿರಾಣಿ, ದೂಡಾ ಮಾಜಿ ಅಧ್ಯಕ್ಷರಾದ ಯಶವಂತರಾವ್ ಜಾಧವ್, ದೇವರಮನೆ ಶಿವಕುಮಾರ್, ಓಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ವಿರೋಧ ಪಕ್ಷದ ನಾಯಕ ಪ್ರಸನ್ನ ಕುಮಾರ್, ಮಾಜಿ ಮೇಯರ್ ಗುರುನಾಥ್, ಹೇಮಂತ್ ಕುಮಾರ್, ಅಣಜಿ ಗುಡ್ಡೇಶ್, ಜಯಮ್ಮ, ವಿನಯ್ ಸೇರಿದಂತೆ ಬಿಜೆಪಿ ಮುಖಂಡರು ಇದ್ದರು.

## ಅಬಕಾರಿ ಅಕ್ರಮ : ಐ.ಟಿ. ಹಾಗೂ ಸಿ.ಬಿ.ಐ.ಗಳಿಂದಲೂ ಪತ್ತೆ

ನವದೆಹಲಿ, ಮಾ. 31 - ದೆಹಲಿಯ ಅಬಕಾರಿ ನೀತಿಯ ಹಗರಣದ ಕಾರಣದಿಂದ ದೊರೆತ 45 ಕೋಟಿ ರೂ.ಗಳ ಕಿಕ್‌ಬ್ಯಾಕ್ ಅನ್ನು ಗೋವಾದಲ್ಲಿ ಆಮ್ ಆದ್ಮಿ ಪಾರ್ಟಿ ಚುನಾವಣಾ ಪ್ರಚಾರಕ್ಕೆ ಬಳಸಿರುವುದು ಆದಾಯ ತೆರಿಗೆ ಇಲಾಖೆ ಹಾಗೂ ಸಿ.ಬಿ.ಐ. ತನಿಖೆಯಿಂದಲೂ ಪತ್ತೆಯಾಗಿದೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ.

ಈ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದ್ದು, ಅವರನ್ನು ಬಂಧಿಸಿದೆ. ಹವಾಲಾ ಹಾಗೂ ಅಂಗಡಿಯಾಗಳ ಮೂಲಕ ಹಣವನ್ನು ಗೋವಾಗೆ ರವಾನಿಸಲಾಗಿದೆ.

2022ರ ಗೋವಾ ವಿಧಾನಸಭಾ ಚುನಾವಣೆಯಲ್ಲಿ ಈ ಹಣ ಬಳಸಲಾಗಿದೆ ಎಂಬುದು ಆದಾಯ ತೆರಿಗೆ ಇಲಾಖೆ ಹಾಗೂ ಸಿ.ಬಿ.ಐ.ಗಳ ಪ್ರತ್ಯೇಕ ತನಿಖೆಯಿಂದ ಕಂಡುಬಂದಿದೆ ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

## ಆನಗೋಡು - ಅಣಜಿ ಭಾಗದಲ್ಲಿ ಇಂದು ಗಾಯತ್ರಿ ಸಿದ್ದೇಶ್ವರ ಪ್ರಚಾರ

ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ್ ಅವರು ಆನಗೋಡು ಹಾಗೂ ಅಣಜಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಇಂದು ಮತಯಾಚನೆ ಮಾಡಲಿದ್ದಾರೆ.

ಬೆಳಗ್ಗೆ 9 ಕ್ಕೆ ಕಿತ್ತೂರು, 9.30 ಕ್ಕೆ ಕುರುಡಿ, 10 ಕ್ಕೆ ಐಗೂರು, ಬೋರಗೊಂಡನಹಳ್ಳಿ, 10.30 ಕ್ಕೆ ಗಾಂಧಿನಗರ, 11 ಕ್ಕೆ ಹುಲಿಕಟ್ಟೆ, 11.30 ಕ್ಕೆ ಕೆರೆಯಾಗಳಹಳ್ಳಿ, 11.45 ಕ್ಕೆ ಗಿರಿಯಾಪುರ, ಮಧ್ಯಾಹ್ನ 12 ಕ್ಕೆ ಗೊಲ್ಲರಹಳ್ಳಿ, 12.30 ಕ್ಕೆ ಅಣಜಿ, 1 ಗಂಟೆಗೆ ಮೆಳ್ಳೆಕಟ್ಟೆ, 1.30 ಕ್ಕೆ ಆಲೂರು ಹಟ್ಟಿ, ಲಿಂಗಾಪುರ, 2 ಕ್ಕೆ ಆಲೂರು, 2.30 ಕ್ಕೆ ಬಸವನಾಳು, ಬಸವನಾಳು ಗೊಲ್ಲರಹಟ್ಟಿ, 3.45 ಕ್ಕೆ ಶ್ರೀಕೃಷ್ಣ ನಗರ (ಐಗೂರು ಗೊಲ್ಲರಹಟ್ಟಿ), ಸಂಜೆ 4.10 ಕ್ಕೆ ಐಗೂರು, ಬೋರಗೊಂಡನಹಳ್ಳಿ, 4.30 ಕ್ಕೆ ಅಗಸನಕಟ್ಟೆ, 5 ಕ್ಕೆ ತುಂಬಿಗೆರೆ, 5.30 ಕ್ಕೆ ರುದ್ರನಕಟ್ಟೆ, ಶಾಸ್ತ್ರಿಹಳ್ಳಿ, 6ಕ್ಕೆ ಕಂದನಕೋವಿ, ಮುಡೇನಹಳ್ಳಿ, ಜಮ್ಮಾಪುರ, 6.30 ಕ್ಕೆ ಗುಡಾಳ್, ಮ್ಯಾಸರಹಳ್ಳಿ, ಕೆಂಚಮ್ಮನಹಳ್ಳಿ, 7 ಕ್ಕೆ ಗುಮ್ಮನೂರು, ಕದರಪ್ಪನಹಟ್ಟಿ, ಹೊಸಳ್ಳಿ, 7.30 ಕ್ಕೆ ಪವಾಡರಂಗವ್ವನಹಳ್ಳಿ, 8 ಕ್ಕೆ ಶಿವಪುರ ಗ್ರಾಮಗಳಲ್ಲಿ ಮತ ಯಾಚನೆ ಮಾಡಲಿದ್ದಾರೆ.

## ಸಾದರ ಲಿಂಗಾಯತ ಸಮಾಜದ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು

ದಾವಣಗೆರೆ, ಮಾ. 31- 2023-24 ನೇ ಸಾಲಿನ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾಭ್ಯಾಸಿಗಳಾಗಿದ್ದು, ಸರ್ಕಾರಿ ಕೋಟಾದಲ್ಲಿ ಸ್ಥಾನಗಳಿಸಿ ವಿದ್ಯಾಭ್ಯಾಸ ಮಾಡುತ್ತಿರುವ ಕರ್ನಾಟಕ ರಾಜ್ಯ ಮಟ್ಟದ ಸಾಧು ಲಿಂಗಾಯತ ಸಮಾಜದ, ಆರ್ಥಿಕ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ಐದು ವರ್ಷದ ಅಧ್ಯಯನದ ಅವಧಿಗೆ ಆರ್ಥಿಕ ನೆರವು ನೀಡಲು ಸಾದರ ನೌಕರರ ಬಳಗ ಮುಂದಾಗಿದೆ. ಸಂಬಂಧಪಟ್ಟ ಸಾಧು ಲಿಂಗಾಯತ ಸಮಾಜದ ವಿದ್ಯಾರ್ಥಿಗಳು ಏಪ್ರಿಲ್ 5 ರೊಳಗಾಗಿ ಕೆ. ನಾಗಪ್ಪ, ಅಧ್ಯಕ್ಷರು, ಸಾದರ ನೌಕರರ ಬಳಗ, ಸಾದರ ಪತ್ತಿನ ಸಹಕಾರ ಬ್ಯಾಂಕ್, 2 ನೇ ಮಹಡಿ, ಡೋರ್ ನಂ. 2000/ಎ-28, 16 ನೇ ತಿರುವು, ತರಳಬಾಳು ಬಡಾವಣೆ-ವಿದ್ಯಾನಗರ ಮುಖ್ಯ ರಸ್ತೆ, ದಾವಣಗೆರೆ ಇವರನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಿ : 7829043544, 9844501366, 9886339984, 9844369744.

# ನಗರದಲ್ಲಿ ಇಂದು ಸಿಪಿಐನಿಂದ ಪ್ರಜಾಪ್ರಭುತ್ವದ ಉಳಿವಿಗಾಗಿ ರಾಜಕೀಯ ಸಮಾವೇಶ

ದಾವಣಗೆರೆ, ಮಾ. 31-ಸಂವಿಧಾನ, ಪ್ರಜಾತಂತ್ರ, ,ಬಹುತ್ವ ಭಾರತ ಉಳಿಸಲು ಭಾರತ ಕಮ್ಯುನಿಸ್ಟ್ ಪಕ್ಷದ ದಾವಣಗೆರೆ ಜಿಲ್ಲಾ ಮಂಡಳಿ ನೇತೃತ್ವದಲ್ಲಿ ನಾಳೆ ದಿನಾಂಕ 1ರ ಸೋಮವಾರ ರಾಜಕೀಯ ಸಮಾವೇಶ ನಡೆಸಲಾಗುವುದು ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ತಿಳಿಸಿದ್ದಾರೆ.

ನಗರದ ಜಯದೇವ ವೃತ್ತದ ಬಳಿ ಇರುವ ಶಿವಯೋಗ ಮಂದಿರದ ಆವರಣದಲ್ಲಿ ನಡೆಯುವ ಈ ಸಮಾವೇಶವನ್ನು ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯರಾದ ಕಾಂ. ಪಿವಿ ಲೋಕೇಶ್ ಉದ್ಘಾಟಿಸಿ ಮಾತನಾಡುವರು.

ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಕಾಂ. ಸಾತಿ ಸುಂದರೇಶ್ ಪ್ರಧಾನಿ ಮೋದಿ ಅವರು ಕಳೆದ ಹತ್ತು ವರ್ಷಗಳಲ್ಲಿ ನೀಡಿದ ಹುಸಿ ಭರವಸೆಗಳ ಪುಸ್ತಕವನ್ನು ಬಿಡುಗಡೆಗೊಳಿಸಿ ಪ್ರಾಸ್ತಾವಿಕವಾಗಿ ಮಾತನಾಡುವರು. ಉಳಿದಂತೆ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಹೆಚ್.ಬಿ. ಮಂಜಪ್ಪ, ದಿನೇಶ್ ಕೆ.ಶೆಟ್ಟಿ, ಸಿಪಿಐ ಜಿಲ್ಲಾ ಖಜಾಂಚಿ ಆನಂದರಾಜ್, ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ಶಿವಕುಮಾರಪ್ಪ ಮತ್ತು ಅರುಣ್ ಕುಮಾರ್, ಜಬೀನಾ ಖಾನಂ ಸೇರಿದಂತೆ ಮತ್ತಿತರರು ಸಮಾವೇಶದಲ್ಲಿ ಅತಿಥಿಗಳಾಗಿ ಭಾಗವಹಿಸುವರು.

ಸಮಾವೇಶದ ಆರಂಭಕ್ಕೂ ಮೊದಲು ಬೆಳಿಗ್ಗೆ 11 ಗಂಟೆಗೆ ಗಾಂಧಿ ಸರ್ಕಲ್‌ನಿಂದ ಕಾರ್ಯಕರ್ತರು ಮೆರವಣಿಗೆಯಲ್ಲಿ ಅಶೋಕ ರಸ್ತೆ ಮೂಲಕ ಶಿವಯೋಗ ಮಂದಿರಕ್ಕೆ ಆಗಮಿಸಿದ ನಂತರ, ರಾಜಕೀಯ ಸಮಾವೇಶ ಆರಂಭಿಸಲಾಗುವುದು ಎಂದು ಅವರು ವಿವರಿಸಿದ್ದಾರೆ.

ಸಿಪಿಐ, ಕಾಂಗ್ರೆಸ್, ಆಮ್ ಆದ್ಮಿ ಪಕ್ಷದ ಎಲ್ಲಾ ಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸುವಂತೆ ಸಿಪಿಐ ಜಿಲ್ಲಾ ಸಹಕಾರ್ಯದರ್ಶಿಗಳಾದ ಹೆಚ್.ಜಿ. ಉಮೇಶ್ ಆವರಗೆರೆ, ಆವರಗೆರೆ ವಾಸು, ಮುಖಂಡರುಗಳಾದ ಎಂ.ಬಿ.ಶಾರದಮ್ಮ, ಕೆರನಹಳ್ಳಿ ರಾಜು ಕರೆ ನೀಡಿದ್ದಾರೆ.

# ಪದವಿಗಾಗಿ ಸಂಶೋಧನೆ ನಡೆಸಿದರೆ ಪ್ರಯೋಜನವಿಲ್ಲ




### ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ.ಕುಂಬಾರ ಸಲಹೆ

ದಾವಣಗೆರೆ, ಮಾ.31- ಪದವಿಗಾಗಿ ಸಂಶೋಧನೆ ನಡೆಸಿದರೆ ಯಾವುದೇ ಪ್ರಯೋಜನವಿಲ್ಲ. ಗ್ರಾಮೀಣ ಪ್ರದೇಶದ ಜನರು, ಬೀದಿ ಬದಿಯ ವ್ಯಾಪಾರಿಗಳು, ದಿನಗೂಲಿ ನೌಕರರು, ಕೃಷಿಕರು ಮತ್ತು ಕಾರ್ಮಿಕರ ಆರ್ಥಿಕ, ಸಾಮಾಜಿಕ ಬೆಳವಣಿಗೆಗೆ ಅಗತ್ಯವಿರುವ ಯೋಜನೆ ಆಧರಿಸಿ ಸಂಶೋಧನೆ ನಡೆಸಬೇಕು ಎಂದು ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ.ಕುಂಬಾರ ಸಲಹೆ ನೀಡಿದರು.

ದಾವಣಗೆರೆ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗವು ನವದೆಹಲಿಯ ಐಸಿಎಸ್‌ಎಸ್‌ಆರ್ ಸಹಯೋಗದಲ್ಲಿ ಮೊನ್ನೆ ನಡೆದ ರಾಷ್ಟ್ರೀಯ ಮಟ್ಟದ ಸಂಶೋಧನೆ ಮತ್ತು ದತ್ತಾಂಶ ವಿಶ್ಲೇಷಣೆ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಜನರಿಗೆ ಸುಲಭವಾಗಿ ಕೈಗೆಟಕುವ ರೀತಿಯಲ್ಲಿ ಸೌಲಭ್ಯ ಲಭಿಸುವಂತೆ ಮಾಡುವ ಬಹುಶಿಸ್ತೀಯ ಸಂಶೋಧನೆಗಳಿಗೆ ಹೆಚ್ಚಿನ ಬೇಡಿಕೆಯಿದ್ದು, ಈ ನಿಟ್ಟಿನಲ್ಲಿ ಹೆಚ್ಚಿನ ಸಂಶೋಧನೆಗಳು ನಡೆಯಬೇಕು ಎಂದು ಕಿವಿ ಮಾತು ಹೇಳಿದರು.

ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶಗಳು ಸಂಶೋಧನೆಯ ವಿಧಾನ ಮತ್ತು ಅಧ್ಯಯನ ಕ್ರಮವನ್ನು ಸುಲಭಗೊಳಿಸಿವೆ. ಅವುಗಳ ಪ್ರಯೋಜನ ಪಡೆದು ಗುಣಮಟ್ಟದ ಸಂಶೋಧನೆಗೆ ಆದ್ಯತೆ ನೀಡಬೇಕೇ ಹೊರತು ತಂತ್ರಜ್ಞಾನವನ್ನೇ ಅವಲಂಬಿಸಬಾರದು ಎಂದರು.

ವಾಣಿಜ್ಯ ಮತ್ತು ಆಡಳಿತ ನಿಕಾಯದ ಡೀನ್ ಪ್ರೊ.ಆರ್. ಶಶಿಧರ್ ಮಾತನಾಡಿ, ಆಧುನಿಕ ತಂತ್ರಜ್ಞಾನಗಳು ಸಂಶೋಧನಾ ಕ್ರಮದ ದತ್ತಾಂಶ ವಿಶ್ಲೇಷಣೆ ಹಾಗೂ ನಿರ್ವಹಣೆಗೆ ಹೆಚ್ಚು ಪ್ರಯೋಜನಕಾರಿಯಾಗಿದ್ದು, ಜಟಿಲ ಸಮಸ್ಯೆಗಳಿಗೂ ತಕ್ಷಣವೇ ಪರಿಹಾರ ಕಂಡುಕೊಳ್ಳುವ ಅವಕಾಶ ಕಲ್ಪಿಸಿವೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸಂಶೋಧನೆಯ ವ್ಯಾಪ್ತಿ ವಿಶಾಲವಾಗಿ ಹರಡಿದೆ. ಗುಣಮಟ್ಟದ ಸಂಶೋಧನೆಯ ಮೂಲಕ ಸಮಾಜ ಹಾಗೂ ದೇಶದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಲು ಗಮನ ಹರಿಸಬೇಕಾಗಿದೆ ಎಂದು ತಿಳಿಸಿದರು.

ಕಲಾ ಮತ್ತು ಮಾನವಿಕ ಅಧ್ಯಯನ ನಿಕಾಯದ ಡೀನ್ ಪ್ರೊ. ಸುಚಿತ್ರಾ ಸ್ವಾಗತಿಸಿದರು. ಡಾ. ಸುಂದರಂ ವರದಿ ವಾಚಿಸಿದರು. ಕಾರ್ಯಾಗಾರದ ನಿರ್ದೇಶಕ ಪ್ರೊ. ಹುಚ್ಚೇಗೌಡ ವಂದಿಸಿದರು.

ಕುಲಸಚಿವ ಪ್ರೊ.ಯು.ಎಸ್. ಮಹಾಬಲೇಶ್ವರ, ಪ್ರೊ. ಸೆಲ್ವಿ, ಡಾ.ಡಿ.ಎಚ್. ಗಿರೀಶ್ ಇದ್ದರು.

## ನಗರದಲ್ಲಿ ನಾಳೆ ಸಂತೋಷದ ಕಾರ್ಯಾಗಾರ



ದಾವಣಗೆರೆ, ಮಾ.31-ಗುರುದೇವ ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ 18 ವರ್ಷ ಮೇಲ್ಪಟ್ಟ ವರಿಗೆ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ಪಿ.ಜೆ. ಬಡಾವಣೆಯ ಡಾ. ಬಾಣಾಪುರ ಮಠ ಮಕ್ಕಳ ಆಸ್ಪತ್ರೆಯಲ್ಲಿ ನಾಡಿದ್ದು ದಿನಾಂಕ 2ರ ಮಂಗಳವಾರದಿಂದ ಇದೇ ದಿನಾಂಕ 7ರವರೆಗೆ ಬೆಳಿಗ್ಗೆ ಮತ್ತು ಸಂಜೆ 2 ಬ್ಯಾಚುಗಳಲ್ಲಿ ನಡೆಯಲಿದೆ.

ವಿವರಕ್ಕೆ ಸಂಪರ್ಕಿಸಿ : 99005 01877, 77601 55659.

## ಮೋದಿಯಿಂದ ರಾಷ್ಟ್ರಪತಿಗೆ ಅವಮಾನ : ಕಾಂಗ್ರೆಸ್

ನವದೆಹಲಿ, ಮಾ. 31 – ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾನಿ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡುವಾಗ ಪ್ರಧಾನ ಮಂತ್ರಿ ನರೇಂದ್ರ ಮೋದಿ ನಿಂತುಕೊಂಡಿಲ್ಲ. ಆ ಮೂಲಕ ರಾಷ್ಟ್ರಪತಿಗೆ ಅಗೌರವ ತೋರಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ರಾಷ್ಟ್ರಪತಿ ಮುರ್ಮು ಅವರು ಅಡ್ವಾನಿ ನಿವಾಸದಲ್ಲಿ ಪದಕ ನೀಡುತ್ತಿರುವ ಚಿತ್ರವನ್ನು ಪ್ರದರ್ಶಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಈ ಗೌರವ ಪ್ರದಾನ ಮಾಡುವಾಗ ಅಡ್ವಾನಿ ಹಾಗೂ ಪ್ರಧಾನಿ ಮೋದಿ ಕುರ್ಚಿಯಲ್ಲಿ ಕುಳಿತುಕೊಂಡಿದ್ದಾರೆ ಎಂದರು.


## ಸಾರ್ವಜನಿಕ ಪ್ರಕಟಣೆ

ಈ ಕೆಳಕಂಡ ಪ್ರಕಟಣೆದಾರರು ಈ ಮುಖೇನ ಸಾರ್ವಜನಿಕ ಪ್ರಕಟಣೆ ನೀಡುವುದೇನೆಂದರೆ ನಾನು ದಿ. 28.03.2024 ರಂದು ದಾವಣಗೆರೆಯ ಪಿ.ಜೆ. ಬಡಾವಣೆಯಿಂದ ರೈಲ್ವೆ ನಿಲ್ದಾಣದ ಬಳಿ ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಿರುವಾಗ ಮೂಲ ನೋಂದಣಿ ಶುದ್ಧ ಕ್ರಯ ಪತ್ರ ನಂಬರ್ 3636 ದಿ. 19.7.2006, ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ನಂಬರ್ 8900 ದಿ. 11.12.2006 ಮತ್ತು ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ರದ್ದಿಯಾತಿ ಪತ್ರ ನಂಬರ್ 10550 ದಿ. 2.2.2007 ಹಾಗೂ ಇತರೆ ರೆವಿನ್ಯೂ ದಾಖಲೆಗಳಿರುವ ಕವರ್ ಜೆರಾಕ್ಸ್ ಮಾಡಿಸಲು ಹೈಸ್ಕೂಲ್ ಮೈದಾನದ ಹತ್ತಿರ ನ್ಯಾಯಾಲಯದ ಪಕ್ಕ ಇರುವ ಜೆರಾಕ್ಸ್ ಅಂಗಡಿಗೆ ಹೋಗಿ ಜೆರಾಕ್ಸ್ ಮಾಡಿಸಿಕೊಂಡು ವಾಪಾಸ್ ರೈಲ್ವೆ ನಿಲ್ದಾಣದ ಬಳಿ ಕೈಜಾರಿ ಕೆಳಗೆ ಬಿದ್ದಿತು.

ಸ್ವಲ್ಪ ಮುಂದೆ ಹೋದಾಗ ಆ ಕವರ್ ಬಿದ್ದಿರುವುದು ಗೊತ್ತಾಗಿ ನಾನು ಬಂದ ಮಾರ್ಗದಲ್ಲಿಯೇ ಕೂಡಲೇ ಹಿಂದಿರುಗುವಷ್ಟರಲ್ಲಿ ಸದರಿ ಕವರ್ ಸಿಕ್ಕಿತು, ಆದರೆ ಆ ಕವರ್‌ನಲ್ಲಿದ್ದ ಮೂಲ ನೋಂದಣಿ ಶುದ್ಧ ಕ್ರಯ ಪತ್ರ ನಂಬರ್ 3636 ದಿ. 19.7.2006, ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ನಂಬರ್ 8900 ದಿ. 11.12.2006 ಮತ್ತು ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ರದ್ದಿಯಾತಿ ಪತ್ರ ನಂಬರ್ 10550 ದಿ. 2.2.2007 ಕಳೆದಿರುತ್ತದೆ. ಆದರೆ ಆದರೊಂದಿಗೆ ಇರುವ ಇತರೆ ರೆವಿನ್ಯೂ ದಾಖಲೆಗಳು ಹಾಗೆಯೇ ಇದ್ದವು. ಆದ ಕಾರಣ ಸದರಿ ಮೂಲ ನೋಂದಣಿ ಶುದ್ಧ ಕ್ರಯ ಪತ್ರ ನಂಬರ್ 3636 ದಿ. 19/07/2006 ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ನಂ. 8900 ದಿ. 11.12.2006 ಮತ್ತು ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ರದ್ದಿಯಾತಿ ಪತ್ರ ನಂಬರ್ 10550 ದಿ. 2.2.2007 ದಾಖಲೆಗಳು ಯಾರಿಗಾದರೂ ದೊರೆತಲ್ಲಿ ಕೂಡಲೇ ಈ ಕೆಳಕಂಡ ಪ್ರಕಟಣೆದಾರರ ವಿಳಾಸಕ್ಕೆ ಸಂಪರ್ಕಿಸಬೇಕೆಂದು ಸದರಿ ಪ್ರಕಟಣೆದಾರರು ತಮ್ಮ ಮೇಲೆ ಯಾವುದೇ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿಲ್ಲ ಹಾಗೂ ತಮ್ಮ ಮೇಲೆ ಪ್ರಕಟಣೆದಾರರು ಯಾವುದೇ ರೀತಿಯ ಕಾನೂನಿನ ಕ್ರಮ ಕೈಗೊಳ್ಳುವುದಿಲ್ಲವೆಂದು ತಿಳಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ಸಬ್-ರಿಜಿಸ್ಟ್ರಾರ್‌ರವರ ಕಛೇರಿ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ಸಿಟಿ, ಶ್ರೀ ಎಸ್.ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿ ಈ ಹಿಂದೆ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರ ಇವರು ರಚಿಸಿರುವಂತಹ ಸೈಟುಗಳ ಪೈಕಿ ಸೈಟ್ ನಂ. 859 (ಎಂಟು ನೂರಾ ಐವತ್ತೊಂಭತ್ತು) ಮಹಾನಗರ ಪಾಲಿಕೆಯ ಚಾಲ್ತಿ ಡೋರ್ ನಂ. 859 ಅಳತೆ ಪೂರ್ವ-ಪಶ್ಚಿಮ 35 ಅಡಿ, ಉತ್ತರ-ದಕ್ಷಿಣ, 30 ಅಡಿ (35x30 ಅಡಿ x 1050 ಚದುರಡಿ) ಇದ್ದು, ಮೀಟರ್‌ಗಳಲ್ಲಿ ಅಳತೆ 10.67x9.14 ಮೀಟರ್ = ಒಟ್ಟು 97.5238 ಚದುರ ಮೀಟರ್‌ವುಳ್ಳ ಹಾಗೂ ಸದರಿ ಜಾಗದಲ್ಲಿ ಕಟ್ಟಿಸಿರತಕ್ಕ 700 ಚದುರಡಿ ಗ್ರೌಂಡ್ ಫ್ಲೋರ್, 700 ಚದುರಡಿ ಫಸ್ಟ್ ಫ್ಲೋರ್ ಆರ್.ಸಿ.ಸಿ. ರೂಫಿಂಗ್ ವುಳ್ಳ ವಾಸದ ಮನೆಗಳು, ಸದರಿ ಮನೆಗಳ ನೆಲಕ್ಕೆ ಮೊಸಾಯಿಕ್ ಟೈಲ್ಸ್ ಹಾಕಿಸಿದ್ದು, ಕಿಟಕಿ ಮತ್ತು ಬಾಗಿಲುಗಳಿಗೆ ಕಾಡು ಜಾತಿಯ ಮರವನ್ನು ಉಪಯೋಗಿಸಿದ್ದು, ಸದರಿ ಮನೆಗಳಲ್ಲಿ ವಿದ್ಯುಚ್ಛಕ್ತಿ, ನೀರು ಮತ್ತು ಶೌಚಾಲಯದ ಸೌಕರ್ಯಗಳು ಒಳಗೊಂಡಿರುತ್ತದೆ. ಈ ರೀತಿ ವುಳ್ಳ ವಾಸದ ಮನೆ ಮತ್ತು ಜಾಗ ಸಹಿತವಾದ ಪೂರಾ 35x30 ಅಡಿವುಳ್ಳ ಸ್ವತ್ತಿಗೆ ಚಕ್ಕುಬಂದಿ : **ಪೂರ್ವಕ್ಕೆ:** 25 ಅಡಿ ಅಗಲದ ರಸ್ತೆ, **ಪಶ್ಚಿಮಕ್ಕೆ:** ಸೈಟ್ ನಂ. 806, **ಉತ್ತರಕ್ಕೆ** : ಸೈಟ್ ನಂ. 860, **ದಕ್ಷಿಣ** : ಸೈಟ್ ನಂ. 858.

ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಮೂಲ ದಾಖಲೆಗಳ ವಿವರ ಈ ಕೆಳಕಂಡ ಇದೆ.

**ವಿ.ಸೂ :** ಸದರಿ ಮೇಲ್ಕಾಣಿಸಿದ ಮೂಲ ನೋಂದಣಿ ಶುದ್ಧ ಕ್ರಯ ಪತ್ರ ನಂಬರ್ 3636 ದಿ. 19.07.2006 ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ನಂಬರ್ 8900 ದಿ. 11.12.2006 ಮತ್ತು ಮೂಲ ನೋಂದಣಿ ಸ್ವಾಧೀನ ರಹಿತ ಕ್ರಯದ ಕರಾರು ರದ್ದಿಯಾತಿ ಪತ್ರ ನಂಬರ್ 10550 ದಿ. 2.2.2007 ದಾಖಲೆಗಳು ಯಾರಾದರೂ ನೀಡಿದಲ್ಲಿ ಅವರಿಗೆ ಸೂಕ್ತ ಬಹುಮಾನ ನೀಡಲಾಗುವುದು.

ಪ್ರಕಟಣೆದಾರ
**ದತ್ತಾತ್ರೇಯ ಪಿ. ರಾಯ್ಕರ್ ಬಿನ್ ಪ್ರಭಾಕರ್ ಜಿ. ರಾಯ್ಕರ್,**
ಮನೆ ನಂ. 136, ಜಿ. ಎಸ್. ಶಿವರುದ್ರಪ್ಪ ರಸ್ತೆ, ಶಿಕಾರಿಪುರ ಟೌನ್, ಶಿವಮೊಗ್ಗ ಜಿಲ್ಲೆ,
**ಮೊಬೈಲ್ ಸಂಖ್ಯೆ : 90364 80508**

# ಇತಿಹಾಸ ನೆನಪಿಸಿದ ರಂಗ ಪ್ರಯೋಗಗಳು



ಹರಪನಹಳ್ಳಿ

ಹರಪನಹಳ್ಳಿ, ಮಾ.31- ಸಮಸ್ತರು (ಹರಪನಹಳ್ಳಿ), ಆದರ್ಶ ಮಹಿಳಾ ಮಂಡಳಿ ಹಾಗೂ ಸಂಪ್ರದಾಯ ಟ್ರಸ್ಟ್ (ಹರಪನಹಳ್ಳಿ) ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಕಾಶೀ ಮಠದ ಸಭಾಂಗಣದಲ್ಲಿ ಎರಡು ಅರ್ಥಪೂರ್ಣ ಪ್ರದರ್ಶನಗಳು ಉತ್ತಮ ಅಭಿನಯದಿಂದ ಪ್ರೇಕ್ಷಕರನ್ನು ಮೋಡಿ ಮಾಡಿದ ಹಾಗೆ ನಿಶ್ಯಬ್ಧವಾಗಿ ಚಿಂತನೆಗೆ ಹಚ್ಚಿಸಿದವು.

ಸಂಪ್ರದಾಯ ಟ್ರಸ್ಟ್ ವತಿಯಿಂದ ಹರಪನಹಳ್ಳಿಯ ಪ್ರಥಮ ಪಾಳೇಗಾರ ದಾದಯ್ಯನಾಯಕ ಪ್ರಯೋಗವಂತು ಹರಪನಹಳ್ಳಿ ಇತಿಹಾಸವನ್ನು ನೆನಪಿಸಿ ಉತ್ಸಾಹ ಹೆಚ್ಚಿಸಿತು.

ದಾದಯ್ಯ ನಾಯಕಗೆ ಚಿತ್ರದುರ್ಗದ ಮತ್ತಿ ತಿಮ್ಮಣ್ಣ ನಾಯಕ ಓಲೆ ಕಳಿಸಿ ನಮಗೆ ಬಸವಾಪಟ್ಟಣ ಕೆಂಗಣ್ಣ ನಾಯಕ ಪದೇಪದೇ ದಾಳಿ ಮಾಡುತ್ತಿರುವುದರಿಂದ ನಮ್ಮ ಕೋಟೆಯ ದವಸ ಧಾನ್ಯಗಳು ಖಾಲಿಯಾಗುತ್ತಿರುವುದರಿಂದ ಹೆಚ್ಚು ಕಾಲ ನಮ್ಮಿಂದ ಪ್ರತಿರೋಧ ಒಡ್ಡಲು ನಮಗೆ ಕಷ್ಟಕರವಾಗುತ್ತದೆ.

ಅವನನ್ನು ಹಿಮ್ಮೆಟ್ಟಿಸಲು ಸಮರ್ಥವಾದರೆ ನೀನೇ ದಯವಿಟ್ಟು ನಮ್ಮ ನೆರವಿಗೆ ಬನ್ನಿ ಎಂದು ಓಲೆ ಕಳಿಸಿ ಕೋರಿದ್ದರಿಂದ ದಾದಾಯ್ಯನಾಯಕ ಹರಪನಹಳ್ಳಿ ಯಿಂದ ದವಸ ಧಾನ್ಯ ಹೊತ್ತು ಸೈನ್ಯದೊಂದಿಗೆ ಹೋಗಿ ಹೋರಾಡಿ ಕೆಂಗಣ್ಣನನ್ನು ಹಿಮ್ಮೆಟ್ಟಿಸಿದನು.

ಈತನ ಪರಾಕ್ರಮ ಮೆಚ್ಚಿ ಅಂದಿನ ಚಿತ್ರದುರ್ಗದ ತಿಮ್ಮಣ್ಣ ನಾಯಕ ತನ್ನ ಮಗಳಾದ ಹೊನ್ನವ್ವ ನಾಗತಿಯನ್ನು ವಿವಾಹ ಮಾಡಿಕೊಟ್ಟು ಉಚ್ಚಂಗಿ ದುರ್ಗದ ಕೋಟೆಯನ್ನು ಉಡುಗೊರೆ ಯಾಗಿ ಕೊಟ್ಟರು. ಕಾಲಕಳೆದಂತೆ ತಿಮ್ಮಣ್ಣ ನಾಯಕನ ಮಗ ಕೊಟ್ಟ ಕೋಟೆ ವಾಪಾಸ್ ಪಡೆಯಲು ಸೆಡ್ಡು ಹೊಡೆಯತೊಡಗಿದ ಯುದ್ದ ಆರಂಭವಾಯಿತು.

ದಾದಯ್ಯ ನಾಯಕನ ಹೆಂಡತಿ ದುಃಖಿತಳಾಗಿ ಅತ್ತ ಸಹೋದರರು ಇತ್ತ ಪತಿ ಇಬ್ಬರ ಕದನ ದಲ್ಲಿ .ಯಾರ ಸಾವು ನಾ ನೋಡಲಾರೇನೆಂದು ತಾನೇ ಉಚ್ಚಂಗಿ ದುರ್ಗದ ಕೋಟೆ ಯಿಂದ ದುಮಿಕಿ ಪ್ರಾಣ ತ್ಯಾಗ ಮಾಡಿಕೊಳ್ಳುತ್ತಾಳೆ. ಯುದ್ಧದಲ್ಲಿ ಯಾವುದೇ ಪ್ರಾಣಹರಣ ಮಾಡದೇ ದಾದಯ್ಯ ಚಿತ್ರದುರ್ಗದ ಸೈನ್ಯವನ್ನು ಕೇವಲ ಹಿಮ್ಮೆಟ್ಟಿಸಿ ಮರಳಿ ದಾಗ ತನ್ನ ಮುದ್ದಿನ ಮಡದಿ ಸಾವನ್ನು ಕಂಡು ಉಚ್ಚಂಗಿದೇವಿ ಮುಂದೆ ರೋಧಿಸುತ್ತಾ. ಅವಳೇ ಇಲ್ಲದ ಮೇಲೆ ಈ ಕೋಟೆಯಲ್ಲಿ ಇರುವುದು ಬೇಡವೆಂದು ಹರಿಪುರಕ್ಕೆ ಬರುತ್ತಾನೆ.

ಈ ಪ್ರಸಂಗವನ್ನು ರಂಗ ಪ್ರಯೋಗಕ್ಕೆ ಸಿದ್ದ ಪಡಿಸಿಕೊಂಡ ಬಯಲಾಟ ಅಕಾಡೆಮಿ ಸದಸ್ಯರಾದ ಬಿ. ಪರಶುರಾಮ ತಾನೇ ದಾದಯ್ಯನಾಯಕ ಪಾತ್ರ ಮಾಡಿ ಪಾತ್ರಕ್ಕೆ ಜೀವತುಂಬಿ ಪ್ರೇಕ್ಷಕರನ್ನು ಬೆರಗು ಗೊಳಿಸಿದರು. ಹೊನ್ನವ್ವನಾಗತಿ ಪಾತ್ರಧಾರಿ ತಿಮ್ಮಲಾಪುರದ ರಕ್ಷಿತ ರಂಗಭೂಮಿ ಪ್ರವೇಶ ಇದೇ ಪ್ರಥಮವಾಗಿದ್ದರೂ ಉತ್ತಮ ಅಭಿನಯ ನೀಡಿ ಪ್ರೇಕ್ಷಕರನ್ನು ಕಟ್ಟಿಹಾಕುವಂತೆ ಅಭಿನಯಿಸಿದರು.

ಉಚ್ಚಂಗಿ ದೇವಿ ಪಾತ್ರಧಾರಿ ಟಿ. ಐಶ್ವರ್ಯ, ಸಾಕ್ಷಿಯಾಗಿ ತಿಮ್ಮಲಾಪುರದ ಐಶ್ವರ್ಯ ನಟಿಸಿದ್ದರು. ಬೆಳಕು ಅರುಣ, ಪ್ರಸಾದನ ಶಂಕರ್ ಆರ್ಕಸಾಲಿ ಸಹಾಯಕರಾಗಿ ಕುಮಾರ್, ಆನಂದ, ನಾಗರಾಜ್, ಹೇಮಣ್ಣ, ಮುಂತಾದವರ ಪರಿಶ್ರಮ ಮೆಚ್ಚಬೇಕು. ಚಾನಪ್ಪ ಅರುಂಡಿ ನಾಗರಾಜ್, ರವಿ ಅಧಿಕಾರ್, ಜೆ.ಸಿಐ ಅಧ್ಯಕ್ಷರಾದ ಪ್ರಿಯಾಂಕ ಅಧಿಕಾರ್ ಮುಂತಾದವರು ಮಾತನಾಡಿ ಪ್ರಯೋಗವನ್ನು ಪ್ರಶಂಸಿಸಿದರು.

## ಆತ್ಮಿ ಅಸೋಸಿಯೇಷನ್‌ನಿಂದ ಮಹಿಳಾ ದಿನಾಚರಣೆ, ಆರೋಗ್ಯ ಶಿಬಿರ

ದಾವಣಗೆರೆ, ಮಾ. 31- ಆತ್ಮಿ ಅಸೋಸಿಯೇಷನ್ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಆರೋಗ್ಯ ಶಿಬಿರದಲ್ಲಿ ಉಚಿತವಾಗಿ 60 ಮಹಿಳೆಯರಿಗೆ ಥೈರಾಯ್ಡ್ ತಪಾಸಣೆ ನಡೆಸಲಾಯಿತು.

ಪ್ರೇರಣಾ ಹೆಲ್ತ್ ಕೇರ್ ಕ್ಲಿನಿಕಲ್ ಲ್ಯಾಬೋರೇಟರಿಯ ಸ್ಥಾಪಕರಾದ ಶೀಲಾ ಅನಿಲ್ ಗೌಡರ್ ಮತ್ತು ಅನಿಲ್ ಗೌಡರ್ ತಂಡದವರು ಉಚಿತ ಥೈರಾಯ್ಡ್ ಪರೀಕ್ಷೆ ಮಾಡಿದರು.

ಕಾರ್ಯಕ್ರಮದಲ್ಲಿ ಆತ್ಮಿ ಅಸೋಸಿಯೇಷನ್ ಕೇರ್ ಕ್ಲಬ್‌ನ ಅಧ್ಯಕ್ಷರಾದ ಬಿ. ಪ್ರಸನ್ನ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು. ಶೋಭ ಗೌಡರ್ ಸ್ವಾಗತಿಸಿದರು. ಶ್ರೀಲಕ್ಷ್ಮಿ ಅಜಿತ್ ವಂದಿಸಿದರು.




## ಸೂಪರ್‌ನೋವಾಗಳಿಂದ ಆಗುವ ಅಪಾಯದ ಬಗ್ಗೆ ವಿಜ್ಞಾನಿಗಳ ಲೆಕ್ಕಾಚಾರ

# ಉರಿಯುವುದ ನಿಲ್ಲಿಸಿ ಸಿಡಿಯುವ ತಾರೆಗಳು

ಸೂರ್ಯನಂತಹ ತಾರೆಗಳು ನಿರಂತರವಾಗಿ ಉರಿಯುತ್ತವೆ. ದಶಕಗಳೇ ಉರುಳಿದರೂ, ಅವುಗಳಿಂದ ಹೊರ ಬರುವ ಬೆಳಕಿನಲ್ಲಿ ಶೇ.0.1ರಷ್ಟು ಮಾತ್ರ ವ್ಯತ್ಯಾಸವಾಗುತ್ತದೆ. ಸೂರ್ಯ ಮುಂದಿನ 5 ಶತಕೋಟಿ ವರ್ಷಗಳವರೆಗೆ ನಿರಂತರವಾಗಿ ಉರಿಯಲಿದ್ದಾನೆ ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ.

ಸೂರ್ಯನಂತಹ ನಕ್ಷತ್ರಗಳಲ್ಲಿನ ಅಣು ಶಕ್ತಿ ಖಾಲಿಯಾದ ನಂತರ, ಅವು ಬೃಹತ್ತಾಗಿ ಬೆಳೆಯುತ್ತವೆ. ನಂತರ ಕುಬ್ಜವಾಗುತ್ತವೆ. ಇವುಗಳನ್ನು ಶ್ವೇತ ಕುಬ್ಜ ಎಂದು ಕರೆಯಲಾಗುತ್ತದೆ. ಆದರೆ, ಸೂರ್ಯನಿಗಿಂತ ಎಂಟು ಪಟ್ಟಿಗೂ ದೊಡ್ಡದಾದ ನಕ್ಷತ್ರಗಳು ದೈತ್ಯ ಪ್ರಮಾಣದಲ್ಲಿ ಸಿಡಿಯುವ ಮೂಲಕ ಅಂತ್ಯ ಕಾಣುತ್ತವೆ. ಇದನ್ನು ಸೂಪರ್‌ನೋವಾ ಎಂದು ಕರೆಯಲಾಗುತ್ತದೆ.

ನಮ್ಮ ನಕ್ಷತ್ರ ಪುಂಜವಾದ ಕ್ಷೀರ ಪಥದಲ್ಲಿ ಶತಮಾನದಲ್ಲಿ ಕೈ ಬೆರಳೆಣಿಕೆಯಷ್ಟು ಬಾರಿ ಸೂಪರ್ ನೋವಾ ಉಂಟಾಗುತ್ತದೆ. ಇವು ದೊಡ್ಡ ಪ್ರಮಾಣದಲ್ಲಿ ದ್ದರೂ ಸಹ, ಭೂಮಿಗಿಂತ ಸಾಕಷ್ಟು ದೂರದಲ್ಲಿರುತ್ತವೆ. ಇವುಗಳನ್ನು ಭೂಮಿಯಿಂದ ಸರಿಯಾಗಿ ನೋಡಲೂ ಸಾಧ್ಯವಾಗುವುದಿಲ್ಲ. ಭೂಮಿಯ ಮೇಲೆ ಏನಾದರೂ ಪರಿಣಾಮವಾಗಬೇಕು ಎಂದರೆ, ಸೂಪರ್‌ನೋವಾಗಳು ಭೂಮಿಯ 100 ಬೆಳಕಿನ ವರ್ಷಗಳ ವ್ಯಾಪ್ತಿಯಲ್ಲಿರಬೇಕು.

ಕೆಲವೇ ನಕ್ಷತ್ರಗಳು ಮಾತ್ರ ಸೂಪರ್‌ನೋವಾ ರೀತಿಯಲ್ಲಿ ಅವಸಾನ ಕಾಣುತ್ತವೆ. ಈ ರೀತಿಯ ಸೂಪರ್‌ನೋವಾ ಸಂಭವಿಸಿದಾಗ, ಅವುಗಳಿಂದ ಬರುವ ಬೆಳಕು ನೂರಾರು ಕೋಟಿ ನಕ್ಷತ್ರಗಳಿಗೆ ಸಮನಾಗಿರುತ್ತದೆ. ವಿಶ್ವದಲ್ಲಿ 100 ಶತಕೋಟಿ ನಕ್ಷತ್ರಪುಂಜಗಳಿವೆ. ಹೀಗಾಗಿ ಪ್ರತಿ ಕ್ಷಣದಲ್ಲೂ ಎಲ್ಲೋ ಒಂದು ಮೂಲೆಯಲ್ಲಿ ಸೂಪರ್‌ನೋವಾ ಸಂಭವಿಸುತ್ತಲೇ ಇರುತ್ತದೆ.

ಈ ರೀತಿ ಸಿಡಿಯುವ ನಕ್ಷತ್ರಗಳು ಗಾಮಾ ಕಿರಣಗಳನ್ನು ಹೊರ ಹಾಕುತ್ತವೆ. ಇವುಗಳ ತರಂಗಾಂತರ ಬೆಳಕಿಗಿಂತ ಸಾಕಷ್ಟು ಕಡಿಮೆ ಇರುತ್ತದೆ. ಹೀಗಾಗಿ ಬರಿಗಣ್ಣಿನಿಂದ ಇವುಗಳನ್ನು ನೋಡಲಾಗದು.

ಕ್ಷೀರಪಥದಲ್ಲಿ ಸೂಪರ್‌ನೋವಾ ಸಂಭವಿಸುವುದು ಅಪರೂಪ. ಆದರೂ, ಕೆಲವು ಭೂಮಿಗೆ ಅತ್ಯಂತ ಸಮೀಪದಲ್ಲಿ ಸಂಭವಿಸಿವೆ. 185ನೇ ಇಸವಿಯಲ್ಲಿ ಹಿಂದೆಂದೂ ಕಾಣದೇ ಇದ್ದ ಸ್ಥಳದಲ್ಲಿ ನಕ್ಷತ್ರವೊಂದು ಕಂಡು ಬಂದಿತ್ತು. ಇದು ಸೂಪರ್‌ನೋವಾ ಇರಬೇಕು ಎಂದು ಅಂದಾಜಿಸಲಾಗಿದೆ.

1006ನೇ ಇಸವಿಯಲ್ಲೂ ಹಠಾತ್ತನೇ ನಕ್ಷತ್ರವೊಂದು ಕಂಡು ಬಂದಿತ್ತು. ಇದು 7,200 ನಕ್ಷತ್ರ ವರ್ಷಗಳ ದೂರದಲ್ಲಿ ಸಂಭವಿಸಿದ ಸೂಪರ್‌ನೋವಾ ಎಂದು ಖಗೋಳಶಾಸ್ತ್ರಜ್ಞರು ನಂತರ ಗುರುತಿಸಿದ್ದರು. 1054ರಲ್ಲಿ ಚೀನಾದಲ್ಲಿ ಹಗಲು ಹೊತ್ತಿನಲ್ಲೇ ನಕ್ಷತ್ರವೊಂದು ಕಾಣಿಸಿ ಕೊಂಡಿತ್ತು. ಇದು 6,500 ನಕ್ಷತ್ರ ವರ್ಷಗಳ ದೂರದ ಸೂಪರ್‌ನೋವಾ ಎಂದು ನಂತರ ಗುರುತಿಸಲಾಗಿತ್ತು.



1604ನೇ ಇಸವಿಯಲ್ಲಿ ಕ್ಷೀರಪಥದಲ್ಲಿ ಕೊನೆಯ ಸೂಪರ್‌ನೋವಾ ಸಂಭವಿಸಿತ್ತು ಎಂದು ಜೊಹಾನ್ಸ್ ಕೆಪ್ಲರ್ ವೀಕ್ಷಣಾಲಯದ ಮಾಹಿತಿ ತಿಳಿಸಿದೆ. ಈ ಸೂಪರ್‌ನೋವಾ 600 ಬೆಳಕಿನ ವರ್ಷಗಳ ದೂರದಲ್ಲಿತ್ತು.

ಸೂಪರ್‌ನೋವಾಗಳಿಂದ ವಿಕಿರಣ ಹಾನಿಯಾಗು ತ್ತದೆ. ಸುಮಾರು 25 ಲಕ್ಷ ವರ್ಷಗಳ ಹಿಂದೆ ಭೂಮಿಗೆ 300 ಕಿ.ಮೀ. ದೂರದಲ್ಲಿ ಸೂಪರ್‌ನೋವಾ ಸಂಭವಿಸಿತ್ತು. ಇದರಿಂದ ಬಂದ ಗಾಮಾ ಕಿರಣಗಳು ಓಜೋನ್ ಪದರಕ್ಕೆ ಹಾನಿ ಮಾಡಿದ್ದವು. ಓಜೋನ್ ಪದರ ಸೂರ್ಯನಿಂದ ಬರುವ ಹಾನಿಕಾರಕ ವಿಕಿರಣಗಳಿಂದ ಭೂಮಿಯನ್ನು ರಕ್ಷಿಸುತ್ತದೆ. ಓಜೋನ್ ಹಾನಿಯಿಂದ ಹಲವಾರು ಪ್ರಭೇದಗಳು ನಾಶವಾಗಿದ್ದವು.

ಸೂಪರ್‌ನೋವಾದ ಗಾಮಾ ಕಿರಣಗಳು ಎಲ್ಲ ದಿಕ್ಕುಗಳಿಗೂ ಹರಡುತ್ತವೆ. ಹೀಗಾಗಿ ಸೂಪರ್‌ನೋವಾ ದಿಂದ ದೂರವಿದ್ದಷ್ಟು ಹೆಚ್ಚು ಸುರಕ್ಷತೆ.

30 ಬೆಳಕಿನ ವರ್ಷಗಳ ವ್ಯಾಪ್ತಿಯಲ್ಲಿ ಸೂಪರ್‌ನೋವಾ ಸಂಭವಿಸಿದರೆ, ಓಜೋನ್ ಪದರಕ್ಕೆ ತೀವ್ರ ಹಾನಿಯಾಗುತ್ತದೆ. ಇದರಿಂದ ಜಲಚರಗಳಿಗೆ ಮೊದಲು ಹಾನಿಯಾಗುತ್ತದೆ. ನಂತರ ಸಮೂಹ ನಾಶವೇ ಉಂಟಾಗುತ್ತದೆ. 360ರಿಂದ 375 ದಶಲಕ್ಷ ವರ್ಷಗಳ ಹಿಂದೆ ಸೂಪರ್‌ನೋವಾದಿಂದ ಈ ರೀತಿಯ ಸಮೂಹ ನಾಶವಾಗಿರಬಹುದು ಎಂದು ಕೆಲ ಖಗೋಳಶಾಸ್ತ್ರಜ್ಞರು ಅಂದಾಜಿಸಿದ್ದಾರೆ. ಅದೃಷ್ಟವಶಾತ್, 30 ಬೆಳಕಿನ ವರ್ಷಗಳ ವ್ಯಾಪ್ತಿಯಲ್ಲಿ ಈ ರೀತಿಯ ಸೂಪರ್‌ನೋವಾ ಸಂಭವಿಸುವ ಸಾಧ್ಯತೆ ನೂರಾರು ದಶಲಕ್ಷ ವರ್ಷಗಳಿಗೆ ಒಮ್ಮೆ ಮಾತ್ರ ಇದೆ.

ಆದರೆ, ಕೇವಲ ಸೂಪರ್‌ನೋವಾ ಕಾರಣದಿಂದ ಗಾಮಾ ಕಿರಣಗಳು ಬರುತ್ತವೆ ಎಂದೇನೂ ಅಲ್ಲ. ನ್ಯೂಟ್ರನ್ ನಕ್ಷತ್ರಗಳು ಡಿಕ್ಕಿ ಹೊಡೆಯುವುದರಿಂದಲೂ ಗಾಮಾ ಕಿರಣಗಳಿಂದ ಹಿಡಿದು ಗುರುತ್ವಾಕರ್ಷಣ ಅಲೆಯವರೆಗೆ ಹಲವು ಪರಿಣಾಮಗಳು ಉಂಟಾಗುತ್ತವೆ.

ಸೂಪರ್‌ನೋವಾ ಸ್ಫೋಟದ ನಂತರ ನ್ಯೂಟ್ರನ್ ತಾರೆಗಳು ಉಳಿದುಕೊಳ್ಳುತ್ತವೆ. ಇವುಗಳು ನಗರವೊಂದರ ಗಾತ್ರದಲ್ಲಿರುತ್ತವೆ. ಆದರೆ, ಅವುಗಳ ಸಾಂದ್ರತೆ ಸೂರ್ಯನಿಗಿಂತ 300 ಟ್ರಿಲಿಯನ್ ಪಟ್ಟು ಹೆಚ್ಚಾಗಿರುತ್ತದೆ. ಇವುಗಳು ಡಿಕ್ಕಿ ಹೊಡೆದಾಗ ನ್ಯೂಟ್ರಾನ್‌ಗಳು ಅಟಾಮಿಕ್ ನ್ಯೂಕ್ಲಿಯೈ ಆಗಿ ಪರಿಣಮಿಸುತ್ತವೆ. ಇದರಿಂದ ಬಂಗಾರ ಹಾಗೂ ಪ್ಲಾಟಿನಂ ರೀತಿಯ ಲೋಹಗಳೂ ಸೃಷ್ಟಿಯಾಗುತ್ತವೆ.

ನ್ಯೂಟ್ರನ್ ತಾರೆಯು ಡಿಕ್ಕಿಯ ನಂತರ ತೀವ್ರ ಸ್ವರೂಪದ ಗಾಮಾ ಕಿರಣ ಉತ್ಪಾದಿಸುತ್ತದೆ. ಭೂಮಿಗೆ 10 ಸಾವಿರ ಬೆಳಕಿನ ವರ್ಷಗಳ ದೂರದಲ್ಲಿ ಈ ಡಿಕ್ಕಿ ಉಂಟಾದರೂ, ಓಜೋನ್ ಪದರಕ್ಕೆ ಹಾನಿಯಾಗುತ್ತದೆ. ಇದರಿಂದ ಬ್ಯಾಕ್ಟೀರಿಯಾ ರೀತಿಯ ಸರಳ ಸ್ವರೂಪದ ಜೀವಿಗಳು ನಾಶವಾಗಬಹುದು.

ಆದರೆ, ಅದೃಷ್ಟವಶಾತ್ ನ್ಯೂಟ್ರನ್ ತಾರೆಗಳು ಜೋಡಿಯಾಗಿ ಹುಟ್ಟಿಕೊಳ್ಳುವುದಿಲ್ಲ. ಕಳೆದ 10 ಸಾವಿರ ವರ್ಷಗಳಲ್ಲಿ ಕ್ಷೀರಪಥದಲ್ಲಿ ಕೇವಲ ಒಂದು ನ್ಯೂಟ್ರನ್ ತಾರೆಗಳ ಡಿಕ್ಕಿ ಸಂಭವಿಸಿದೆ. ಇವುಗಳು ಸೂಪರ್‌ನೋವಾ ಸ್ಫೋಟಗಳಿಗಿಂತ ನೂರು ಪಟ್ಟು ಅಪರೂಪ.

ನಿಕಟ ಭವಿಷ್ಯದಲ್ಲಿ ಇಂತಹ ಗಾಮಾ ಕಿರಣಗಳಿಂದ ಭೂಮಿಗೆ ಹಾನಿಯಿಲ್ಲ. ಆದರೆ, ದೀರ್ಘಾವಧಿಯಲ್ಲಿ ಭೂಮಿ ಈ ಸಮಸ್ಯೆಯಿಂದ ತಪ್ಪಿಸಿಕೊಳ್ಳಲಾಗದು.

2022ರ ಅಕ್ಟೋಬರ್‌ನಲ್ಲಿ ಗಾಮಾ ಕಿರಣಗಳ ಅಲೆ ಕಂಡು ಬಂದಿತ್ತು. ಇದು ಭೂಮಿಯಲ್ಲಿ ಮಾನವ ನಾಗರಿಕತೆ ರೂಪುಗೊಂಡ ನಂತರ ಕಂಡು ಬಂದ ಅತಿ ದೊಡ್ಡ ಪ್ರಮಾಣದ ಗಾಮಾ ಕಿರಣಗಳ ಅಲೆಯಾಗಿತ್ತು. ಈ ಸ್ಫೋಟದ ಮೂಲ 2 ಶತಕೋಟಿ ಬೆಳಕಿನ ವರ್ಷಗಳಷ್ಟು ದೂರವಿತ್ತು. ಭೂಮಿಯ ಮೇಲಿನ ಜೀವಿಗಳ ಮೇಲೆ ಯಾವುದೇ ಪರಿಣಾಮವಾಗಲಿಲ್ಲ. ಒಂದು ವೇಳೆ ಕ್ಷೀರಪಥದಲ್ಲಿ ಈ ಸ್ಫೋಟ ಸಂಭವಿಸಿದ್ದರೆ, ಅದರ ಪರಿಣಾಮ ಕನಿಷ್ಠ ದಶಲಕ್ಷ ಪಟ್ಟು ಹೆಚ್ಚಾಗಿರುತ್ತಿತ್ತು ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ. ಇದು ಗಾಮಾ ಕಿರಣಗಳಿಂದ ಆಗಬಹುದಾದ ಹಾನಿಯ ಎಚ್ಚರಿಕೆಯ ಗಂಟೆಯೂ ಆಗಿದೆ.

(ಸಂಗ್ರಹ)

# ಆವಿಷ್ಕಾರ, ಸಂಶೋಧನೆಗಳ ಬಗ್ಗೆ ಜಾಗೃತಿ ಇರಬೇಕು

## ಜಿಎಂ ವಿವಿಯ 'ಆವಿಷ್ಕಾರದ ವಾರ' ಕಾರ್ಯಕ್ರಮದಲ್ಲಿ ಕುಲಪತಿ ಜಿ.ಎಂ.ಲಿಂಗರಾಜು



ದಾವಣಗೆರೆ, ಮಾ.31- ಮುಂದುವರೆಯುತ್ತಿರುವ ಜಗತ್ತಿನಲ್ಲಿ ಆವಿಷ್ಕಾರ ಮತ್ತು ಸಂಶೋಧನೆ ಮತ್ತು ಅವುಗಳ ಅಗತ್ಯಗಳ ಬಗ್ಗೆ ಜಾಗೃತಿ ಇರಬೇಕು ಎಂಬುದಾಗಿ ಜಿಎಂ ವಿಶ್ವ ವಿದ್ಯಾಲಯದ ಕುಲಪತಿ ಜಿ.ಎಂ. ಲಿಂಗರಾಜು ಹೇಳಿದರು.

ನಗರದ ಜಿ.ಎಂ. ವಿಶ್ವವಿದ್ಯಾಲ ಯದಲ್ಲಿ ಹಬ್ಬದ ವಾತಾವರಣ ದಲ್ಲಿ ನಡೆದ ಆವಿಷ್ಕಾರದ ವಾರ (ಇನ್ನೋ ವೇಷನ್ ವೀಕ್) ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕಾರ್ಯಕ್ರಮವನ್ನು ಜಿಎಂ ಐಪಿಎಸ್‌ಆರ್ ಕಾಲೇಜಿನ ಫಾರ್ಮಕಾ ಗ್ನೋಸಿ ವಿಭಾಗದ ಡಾ. ಅಮಿತ್ ಕುಮಾರ್ ಬಿ ನೆರವೇರಿಸಿಕೊಟ್ಟರು.

ಮುಖ್ಯ ಅತಿಥಿಗಳಾಗಿ ಉಪಕುಲಪತಿ ಡಾ. ಎಸ್. ಆರ್. ಶಂಕಪಾಲ್ ಹಾಗೂ ಅತಿಥಿಗಳಾಗಿ ಆರ್ಕ್ಸ್ ಕಂಪನಿಯ ಸಿಇಓ ಡಾ. ಡಿ. ಎಂ. ಶಿವಣ್ಣ ಮತ್ತು ಇನ್ನೋಮಂತ್ರ ಕಂಪನಿ ಸಿಇಓ ಲೋಕೇಶ್ ವೆಂಕಟಸ್ವಾಮಿ, ಶ್ರೀ ಶೈಲ ಟ್ರಸ್ಟ್‌ನ ಟ್ರಸ್ಟಿ ಜಿ. ಎಸ್. ಅನಿತ್ ಕುಮಾರ್, ಸಹ ಉಪಕುಲಪತಿ ಡಾ.ಎಚ್. ಡಿ. ಮಹೇಶಪ್ಪ ಉಪಸ್ಥಿತರಿದ್ದರು.

ಜಿಎಂ ವಿಶ್ವವಿದ್ಯಾಲಯದ ಇನ್ನೋ ವೇಟಿವ್ ವಿಭಾಗದ ನಿರ್ದೇಶಕ ಡಾ. ಗಿರೀಶ್ ಬೋಳಕಟ್ಟಿ ಸ್ವಾಗತಿಸಿದರು.

ಸಂಶೋಧನಾ ನಿರ್ದೇಶಕ ಡಾ. ನಾಗಲಿಂಗಪ್ಪ ಅವರು ಮಾತನಾಡಿ, ಆವಿಷ್ಕಾರ ಮತ್ತು ಸಂಶೋ ಧನೆಯು ಎಲ್ಲಾ ವಿಭಾಗದ ಶಿಕ್ಷಣ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿದ್ದಲ್ಲಿ ಭಾರತ ಅತ್ಯುನ್ನತವಾಗಿ ಮೇಲೇರಬಹುದು ಎಂದು ಹೇಳಿದರು. ಇಡೀ ವಾರ ಸಂಶೋಧನೆಯ ಪ್ರಾಮುಖ್ಯತೆ ಯನ್ನೂ ವಿದ್ಯಾರ್ಥಿಗಳಲ್ಲಿ ಮನದಟ್ಟು ಮಾಡಿಕೊಡಲಾ ಯಿತು. ಐಚ್ಛಿಕ, ಆವಿಷ್ಕರಣೆಯಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ಸ್ಪರ್ಧೆಯನ್ನೂ ಆಯೋಜಿಸಲಾ ಗಿತ್ತು. ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಬಹುಮಾನದ ರೂಪದಲ್ಲಿ ಹತ್ತು ಸಾವಿರ ಹಾಗೂ ಐದು ಸಾವಿರ ರೂ. ನಗದು ಬಹು ಮಾನವನ್ನು ವಿತರಿಸಲಾಯಿತು.


ಇಂಜಿನಿಯರಿಂಗ್ ವಿಭಾಗದಲ್ಲಿ ಚಂದನ ಮತ್ತು ತಂಡ ಪ್ರಥಮ ಸ್ಥಾನ ಹಾಗೂ ಶಶಾಂಕ್ ಮತ್ತು ತಂಡ ದ್ವಿತೀಯ ಸ್ಥಾನ. ಎಂಬಿಎ ವಿಭಾಗದಲ್ಲಿ ಹರ್ಷಿತಾ ವಿ. ಮತ್ತು ತಂಡ ಪ್ರಥಮ ಸ್ಥಾನ ಹಾಗೂ ನೂತನ ಡಿ. ಆರ್. ಮತ್ತು ತಂಡ ದ್ವಿತೀಯ ಸ್ಥಾನ, ಫಾರ್ಮಸಿ ಹಾಗೂ ಬಿಸಿಎ ವಿಭಾಗದಿಂದ ಗಗನಶ್ರೀ ಮತ್ತು ತಂಡ ಪ್ರಥಮ ಹಾಗೂ ಮಧು ಹೆಚ್ ನಾಗಪ್ಪನವರ್ ಮತ್ತು ತಂಡ ದ್ವಿತೀಯ ಸ್ಥಾನ ಪಡೆದರು.

## ಬೇಸಿಗೆ ಚೆಸ್ ತರಬೇತಿ ಶಿಬಿರ

ದಾವಣಗೆರೆ ಚೆಸ್ ಕ್ಲಬ್ ವತಿಯಿಂದ ಇಂದಿನಿಂದ ಇದೇ ದಿನಾಂಕ 15ರವರೆಗೆ ರೆಗೆ ಬೇಸಿಗೆ ಚೆಸ್ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ದಾವಣಗೆರೆ ಚೆಸ್ ಕ್ಲಬ್ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ತಿಳಿಸಿದರು. ವಿವರಕ್ಕೆ ಯುವರಾಜ್ (9945613469), ಮಂಜುಳಾ (7259310197) ಅವರನ್ನು ಸಂಪರ್ಕಿಸುವುದು.

# ಹಾಲಿವಾಣ : ಇಂದಿನಿಂದ ಏಳೂರು ಕರಿಯಮ್ಮ ದೇವಿ ಜಾತ್ರೆ





ಮಲೇಬೆನ್ನೂರು ಸಮೀಪದ ಹಾಲಿವಾಣ ಗ್ರಾಮದ ಗ್ರಾಮದೇವತೆ ಶ್ರೀ ಏಳೂರು ಕರಿಯಮ್ಮ ದೇವಿಯ ಜಾತ್ರಾ ಮಹೋತ್ಸವವು ಇಂದಿನಿಂದ ಇದೇ ದಿನಾಂಕ 5ರವರೆಗೆ ವಿಜೃಂಭಣೆಯಿಂದ ಜರುಗಲಿದೆ. ಹಬ್ಬಕ್ಕಾಗಿ ಹಾಲಿವಾಣ ಗ್ರಾಮ ದೀಪಾಲಂಕಾರಗಳಿಂದ ಝಗಮಗಿ ಸುತ್ತಿದ್ದು, ನವ ವಧುವಿನಂತೆ ಸಿಂಗಾರಗೊಂಡಿದೆ.

14 ವರ್ಷಗಳ ನಂತರ ಅಂದರೆ 15ನೇ ವರ್ಷದಲ್ಲಿ ಗ್ರಾಮ ದೇವತೆ ಹಬ್ಬವನ್ನು ಏಳು ಹಳ್ಳಿಗಳ ಜನರು ಸೇರಿ ಆಚರಿಸುತ್ತಿದ್ದಾರೆ.

ಹಾಲಿವಾಣ, ಕೊಪ್ಪ, ದಿಬ್ಬದಹಳ್ಳಿ, ಯರೇಹಳ್ಳಿ, ಚಿಕ್ಕ ಹಾಲಿವಾಣ, ತಿಮ್ಲಾಪುರ ಮತ್ತು ಚಿಕ್ಕ ತಮ್ಮನಹಳ್ಳಿ, ಬೆಚರ್ ಗ್ರಾಮಗಳಿಗೆ ಒಳಪಟ್ಟಿರುವ ಗ್ರಾಮ ದೇವತೆ ಶ್ರೀ ಏಳೂರು ಕರಿಯಮ್ಮ ದೇವಿಗೆ ಇಂದು ಬೆಳಿಗ್ಗೆ 9.05ಕ್ಕೆ ಕಂಕಣಧಾರಣೆಯೊಂದಿಗೆ ಜಾತ್ರೆಗೆ ಚಾಲನೆ ನೀಡಲಾಗುವುದು. ಬೆಳಿಗ್ಗೆ 9.30ಕ್ಕೆ ಶ್ರೀ ಕರಿಯಮ್ಮ ದೇವಿಗೆ ಅಭಿಷೇಕ ಮತ್ತು ಪುಷ್ಪಾಲಂಕಾರದ ನಂತರ ಮಹಾಪ್ರಸಾದ ವಿನಿಯೋಗ ಇರುತ್ತದೆ.

ಸಂಜೆ 6.30 ರಿಂದ 8 ಗಂಟೆಯವರೆಗೆ ಶ್ರೀ ದೇವಿಯ ಸ್ಮೃತಿ ಮತ್ತು ಮಾರುತಿ ಭಜನಾ ಸಂಘ ದಿಂದ ಭಜನೆ, ರಾತ್ರಿ 8.30 ರಿಂದ ಹೊನ್ನಾಳಿಯ ಶ್ರೀ ಸಂತೃಪ್ತಿ ಅಂಧರ ಶಾಲೆ ಮಕ್ಕಳಿಂದ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ನಾಳೆ ಮಂಗಳವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ಗ್ರಾಮದ ದೇವರು ಗಳಾದ ಶ್ರೀ ಕರಿಯಮ್ಮ, ಶ್ರೀ ಬೀರಲಿಂಗೇಶ್ವರ, ಶ್ರೀ ಹಾಲಸ್ವಾಮಿ, ಶ್ರೀ ಯಲ್ಲಮ್ಮದೇವಿ, ಶ್ರೀ ಗಲ್ಲೆಕಟ್ಟೆ ದುರ್ಗಮ್ಮ ದೇವಿ, ಶ್ರೀ ಪರಶುರಾಮ ಸೇರಿದಂತೆ ಗೂಡುಕಟ್ಟೆಗೆ ಸೇರಿದ ಎಲ್ಲಾ ಏಳು ಗ್ರಾಮಗಳ ದೇವರುಗಳ ಮೆರವಣಿಗೆಯು ಗ್ರಾಮದ ರಾಜಬೀದಿ ಗಳಲ್ಲಿ ಡೊಳ್ಳಿನ ತಂಡಗಳ ಕುಣಿತದೊಂದಿಗೆ ಆಗಮಿಸಿ, ಕರಿಯಮ್ಮ ದೇವಸ್ಥಾನ ತಲುಪುವುದು.

ಸಂಜೆ 6 ಗಂಟೆಯಿಂದ ಗ್ರಾಮದೇವತೆ ಶ್ರೀ ಏಳೂರು ಕರಿಯಮ್ಮ ದೇವಿಯ ಉತ್ಸವ ಮೂರ್ತಿಯನ್ನು ಐರಣಿ ಮಠದ ಆನೆಯ ಅಂಬಾರಿಯ ಮೇಲೆ ಇಟ್ಟು ಉಡುಪಿಯ ರುದ್ರತಾಂಡವ ಚಂಡೆವಾದ್ಯ ಹಾಗೂ ಸಿಡಿಮದ್ದು ಸಿಡಿತದೊಂದಿಗೆ ಗ್ರಾಮದ ರಾಜಬೀದಿಗಳಲ್ಲಿ ಬುಧವಾರ ಬೆಳಗಿನ ಜಾವದವರೆಗೂ ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಗುವುದು.

ಏ. 3ರ ಬುಧವಾರ ಬೆಳಗಿನ ಜಾವ 4.30ಕ್ಕೆ ಏಳೂರು ಘಟೆ ಬಂದ ನಂತರ ದೇವಸ್ಥಾನದ ಬಳಿ ಓಕುಳಿ ತುಂಬಿದ ಹಿಟ್ಟಿನ ಕೋಣಗಳ ಬಲಿ ನೀಡಲಾ ಗುವುದು. ಬೆಳಿಗ್ಗೆ 6 ಗಂಟೆಗೆ ಚರಗ ಹಾಕಲಾಗು ವುದು. 8 ಗಂಟೆ ಯಿಂದ ಹರಕೆ ಹೊತ್ತ ಭಕ್ತರಿಂದ ಉರುಳು ಸೇವೆ, ಬೇವಿ ಉಡುಗೆ, ಬಾಯಿಬೀಗ ಸೇರಿದಂತೆ ವಿವಿಧ ಸೇವೆಗಳು ನಡೆಯಲಿವೆ.

ದಿನಾಂಕ 4ರ ಗುರುವಾರ ಬೆಳಿಗ್ಗೆ 8 ಗಂಟೆಗೆ ದೇವಿಗೆ ವಿಶೇಷ ಪೂಜೆ ಮತ್ತು ಸಂಜೆ 4 ರಿಂದ ಸಿಡಿ ಉತ್ಸವ, ರಾತ್ರಿ 8 ಗಂಟೆಗೆ ಭದ್ರಾವತಿಯ ಚಂದನ ಮ್ಯೂಸಿಕಲ್ ನೈಟ್ಸ್ ಆರ್ಕೆಸ್ಟ್ರಾ ವತಿಯಿಂದ ಮತ್ತು ಹಾಲಿವಾಣ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ರಸಮಂಜರಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ದಿನಾಂಕ 5ರ ಶುಕ್ರವಾರ ಬೆಳಿಗ್ಗೆ ದೇವಿಗೆ ವಿಶೇಷ ಪೂಜೆ, ಸಂಜೆ 4 ರಿಂದ ಬೆಲ್ಲದ ಬಂಡಿ ಉತ್ಸವ ಮತ್ತು ಓಕುಳಿ, ಸಂಜೆ 6 ಗಂಟೆಗೆ ಮಹಾ ಮಂಗಳಾರತಿ ಹಾಗೂ ಕಂಕಣ ವಿಸರ್ಜನೆಯೊಂದಿಗೆ ಜಾತ್ರೆಗೆ ತೆರೆ ಎಳೆಯಲಾಗುವುದು ಎಂದು ಎಸ್.ಜಿ. ಪರಮೇಶ್ವರಪ್ಪ ಮಾಹಿತಿ ನೀಡಿದರು.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :
ಬೆಳಗಾವಿ ಬಸವರಾಜಪ್ಪ (CA)
ಮತ್ತು ಕುಟುಂಬ ವರ್ಗದವರು
ಸ್ಥಳ : ಮಹಾನಗರ ಪಾಲಿಕೆ ಆವರಣ

ಡುಪ್ಲೆಕ್ಸ್ ಮನೆಗಳು ಮಾರಾಟಕ್ಕಿವೆ
ವಿದ್ಯಾನಗರ (ರಂಗನಾಥ ಬಡಾವಣೆ) ಉತ್ತರ 30x50, ಪೂರ್ವ 30x60, ಶಿವ-ಪಾರ್ವತಿ ಬಡಾವಣೆ ಪಶ್ಚಿಮ, 30x45, ಎಸ್.ಎಸ್. 'ಬಿ' ಬ್ಲಾಕ್ ದಕ್ಷಿಣ 30x40, DC ಮನೆ ಸರ್ಕಲ್ ಹತ್ತಿರ ಪೂರ್ವ 30x50.
ಐಗೂರು ವಿಜಯಕುಮಾರ
99457 02495

ಬೇಸಿಗೆ ಶಿಬಿರ
ಶಾಲಾ ಮಕ್ಕಳಿಗಾಗಿ
ಸ್ಪೋಕನ್ ಇಂಗ್ಲಿಷ್, ಕಂಪ್ಯೂಟರ್ ಕ್ಲಾಸಸ್, ನವೋದಯ ಕೋಚಿಂಗ್.
ವಿಕಾಸ್ ಅಕಾಡೆಮಿ, ದಾವಣಗೆರೆ.
93802 29199, 97399 22225

ಸೈಟ್ ಮಾರಾಟಕ್ಕೆ (KHB)
ಕರ್ನಾಟಕ ಹೌಸಿಂಗ್ ಬೋರ್ಡ್
ಕಮರ್ಷಿಯಲ್
1) 12x18 ಮೀ (40X60) ಉತ್ತರ 100 ಅಡಿ ರಸ್ತೆಗೆ (88 ಲಕ್ಷ)
ಕಿರಣ್ ಬೂಸ್ನೂರ್
98440 63409, 97315 63409
ರಿಜಿಸ್ಟರ್ ಖರ್ಚು+ಕಮೀಷನ್ ಸೇರಿ

ಸೈಟುಗಳು ಮಾರಾಟಕ್ಕಿವೆ
ಬನಶಂಕರಿ ಲೇಔಟ್‌ನಲ್ಲಿ 1) 30x40 East, 2) ಡಾಲರ್ಸ್ ಕಾಲೋನಿಯಲ್ಲಿ 40x40 South 3) ಅಥಣಿ ಕಾಲೇಜ್ ಹತ್ತಿರ 30x44 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಮನೆ ಬಾಡಿಗೆಗೆ ಇದೆ
ಸಿದ್ದವೀರಪ್ಪ ಬಡಾವಣೆಯ 3ನೇ ಕ್ರಾಸ್‌ನಲ್ಲಿ ಮೊದಲನೇ ಮಹಡಿಯಲ್ಲಿ 1BHK ಹಾಗೂ 2BHK ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
99005 47475

ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್
ಕಾಶಿ ಪ್ರವಾಸ 13.05.2024 ರಿಂದ 21.05.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ ಪ್ರವಾಸ ವಿಮಾನದಲ್ಲಿ ಪ್ರಯಾಣ. ಆಸಕ್ತಿ ಇರುವವರು ಕರೆ ಮಾಡಿ :
94485 33928, 90086 26473

ಸ್ಪೋಕನ್ ಇಂಗ್ಲಿಷ್
100% ಅತ್ಯುತ್ತಮ ಫಲಿತಾಂಶ
ಟ್ಯೂಷನ್ ಕನ್ನಡ, ಹಿಂದಿ, ವೇದಿಕ್ ಮ್ಯಾಥ್ಸ್, ಹ್ಯಾಂಡ್‌ರೈಟಿಂಗ್
ಮಿರಜ್‌ಕರ್ ಟ್ಯುಟೋರಿಯಲ್
ಮೊ. : 90369 96243

VIDYAPRAPTI TUTORIALS
Excellent coaching centre in Davanagere, For Class 1 to 9 State / CBSE and ICSE Syllabus, All subjects including spoken English and English Grammar classes. Contact : Priya Prakash, KHB Colony, 9th cross, Behind New KSRTC Bus stand, Davanagere.
91130 39155, 98441 54413

ಸೈಟುಗಳು ಮಾರಾಟಕ್ಕಿವೆ
ವಿದ್ಯಾನಗರ ಉತ್ತರ 40x60, ಡಾಲರ್ಸ್ ಕಾಲೋನಿ ಉತ್ತರ 30x50 (ದೊಡ್ಡ ಪಾರ್ಕ್ ಹತ್ತಿರ) ಶಿವ-ಪಾರ್ವತಿ ಬಡಾವಣೆ ಪೂರ್ವ 30x55 (ಅಕ್ಕ-ಪಕ್ಕ) 40x60, ಪಶ್ಚಿಮ 30x50, ಬನಶಂಕರಿ ಬಡಾವಣೆ ಪೂರ್ವ 30x50.
ಐಗೂರು ವಿಜಯಕುಮಾರ
99457 02495

ಆಸ್ಪತ್ರೆಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ
• ಆಯಾ ಕೆಲಸ - 01
ನೇರ ಸಂದರ್ಶನಕ್ಕೆ ಕರೆ ಮಾಡಿ.
ಮೊ : 86186 42929
ಫೋ. : 081922 52228

ವಿಚಾರಿಸಿ
ಇಸಿ, ಇ-ಸ್ವತ್ತು, ಕಂದಾಯ, ಬಿಲ್ಡಿಂಗ್ ಲೈಸೆನ್ಸ್, ಖಾತೆ ಚೇಂಜ್, ಕಳೆದಿರುವ ಹಳೆ ದಾಖಲೆಗಳು, ಕಾರ್ಪೊರೇಷನ್, DUDA ರಿಜಿಸ್ಟರ್‌ಗೆ ಕಾಲ್ ಮಾಡಿ.
ಕಿರಣ್ ಬೂಸ್ನೂರ್
97315 63409, 98440 63409


ಮಳಿಗೆಗಳು ಬಾಡಿಗೆ ದೊರೆಯುತ್ತವೆ
ಸಿತಾರಾ ಬಾರ್ ಹತ್ತಿರ 10x20 ಸೈಜಿನಲ್ಲಿ, 10x20 East, ಎರಡು ಮಳಿಗೆಗಳು ಬಾಡಿಗೆ ಒಂದಕ್ಕೆ 9 ಸಾವಿರ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಬೇಕಾಗಿದ್ದಾರೆ
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಹಾಗೂ ಆಯಾ ಬೇಕಾಗಿದ್ದಾರೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
98450-35710, 99024-52312

ಕೆಲಸಕ್ಕೆ ಬೇಕಾಗಿದ್ದಾರೆ ದಾವಣಗೆರೆ
* ಕಲೆಕ್ಷನ್ ಬಾಯ್ (Any Degree)
* ಅಕೌಂಟೆಂಟ್ (B.Com, M.BA)
* ಆಫೀಸ್ ಬಾಯ್
ವಯೋಮಿತಿ 25 ರಿಂದ 40 ವರ್ಷ, ESI ಸೌಲಭ್ಯವಿದೆ.
80503 22279

ಖಾಲಿ ನಿವೇಶನ ಬಾಡಿಗೆಗೆ ಇದೆ
ಶಾಮನೂರು ಹತ್ತಿರ, ಸರ್ವೀಸ್ ರಸ್ತೆಗೆ ಲಗತ್ತಾಗಿರುವ, ಹೋಟೆಲ್ ರೆಡ್ ಫೋರ್ಟ್ ಎದುರು 26000 ಸಾವಿರ ಚ. ಅಡಿ ನಿವೇಶನವು ವಾಣಿಜ್ಯ ಉದ್ಯಮಕ್ಕೆ ಅನುಕೂಲವಾಗಿರುತ್ತದೆ. ಕಾಂಪೌಂಡ್ ಹಾಕಿಸಿ ಕೊಡುತ್ತೇವೆ. ಆಸಕ್ತರು ಸಂಪರ್ಕಿಸಿ :
94489 80263

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

ಬೇಕಾಗಿದ್ದಾರೆ
ನಗರದ ಪ್ರತಿಷ್ಠಿತ ಬಂಗಾರದ ಅಂಗಡಿ ಯಲ್ಲಿ ಕೆಲಸ ಮಾಡಲು ಆಸಕ್ತ ಯುವಕರು ಬೇಕಾಗಿದ್ದಾರೆ ( ಸೇಲ್ಸ್ ಬಾಯ್ಸ್, ಸೇಲ್ಸ್ ಮ್ಯಾನೇಜರ್, ಆಫೀಸ್ ಬಾಯ್) ಉತ್ತಮ ವೇತನ ಕೊಡಲಾಗುವುದು. ಸಂಪರ್ಕಿಸಿ :
90191 69123

ತಕ್ಷಣ ಮಹಿಳೆಯರು ಬೇಕಾಗಿದ್ದಾರೆ
ವೆಜ್ ಅಂಡ್ ನಾನ್ ವೆಜ್ ನುರಿತ ಮಹಿಳೆಯರು ಅಡುಗೆ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳ ದೊಂದಿಗೆ (MLA) ಮನೆಯಲ್ಲಿ ಕೆಲಸ, ದಾವಣಗೆರೆ. ಸಂಪರ್ಕಿಸಿ :
73535 07622

ಜಮೀನು ಮಾರಾಟಕ್ಕೆ
KHB ಮುಂದೆ
ಬನ್ನಿಕೋಡ್ ರಸ್ತೆ ಸುತ್ತ-ಮುತ್ತ 1, 2, 3, ಮೇನ್ ರೋಡ್‌ಗೆ
ಕಿರಣ್ ಬೂಸ್ನೂರ್
98440 63409, 97315 63409
ಫಾರಂ, ಗೆಸ್ಟ್ ಹೌಸ್ ಮಾಡಲಿಕ್ಕೆ ತುಂಬಾ ಚೆನ್ನಾಗಿದೆ

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಮನ್, ಸೇಲ್ಸ್ ಗರ್ಲ್ಸ್ ಮತ್ತು ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 01

REQUIRED
Office Executive Skills :
Good communication with Basic computer & DTP / Accounting knowldge / Photoshop, PJ. Extn, Davanagere.
99006 66122

ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ
ಸಂಪರ್ಕಿಸಿ.
81056 99985
89715 04492

ಮನೆ ಬಾಡಿಗೆಗೆ ಇದೆ
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

ಪ್ರವೇಶ ಪ್ರಕಟಣೆ
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

ಉದ್ಯೋಗಾವಕಾಶ
ನಮ್ಮ ಸಂಸ್ಥೆಯಿಂದ ಯುವತಿಯರಿಗೆ ಮತ್ತು ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೋಂ ನರ್ಸಿಂಗ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ವಿದ್ಯಾರ್ಹತೆ : 7th, 10th, PUC, ANM, GNM
91486 83185

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

ಸೊಳ್ಳೆ ಮೆಶ್ ಹಾಕಲಾಗುವುದು
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapan Cushion Work
Behind Vital Temple
Maharaj Pet, Davanagere
98445 81966

ಬಾಂಧವ್ಯ ಹೋಮ್ ನರ್ಸಿಂಗ್ ಸರ್ವೀಸ್
ವಯೋವೃದ್ಧರು, ಬೆಡ್ ರಿಡನ್ ಪೇಷಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ)ರೋಗಿಗಳಿಗೆ ಆಯಿಲ್ ಮಸಾಜ್ ಮಾಡಿಸುತ್ತೇವೆ.
85508 36642, 76191 70395

ಆಯಾ ಬೇಕಾಗಿದ್ದಾರೆ
ಹರಿಹರದ ಮನೆಯೊಂದರಲ್ಲಿ ಇದ್ದುಕೊಂಡೇ ಕೆಲಸ ಮಾಡಲು ಆಯಾ ಬೇಕಾಗಿದ್ದಾರೆ. ಊಟ, ವಸತಿ ಹಾಗೂ ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ.
ಮೊ : 70135 88762

WANTED IMMEDIATELY
Experienced principal and lecturers for all subject @ M.E.S PU College , Davanagere. Qualification : M.Sc, B.Ed Part time or Full time.
Apply or contact : M.E.S PUC College
#Anjeneya Badavane, 9th cross Near indragiri chandragiri, Appartment, Davangere -577004
Contact : 98804 36414

## ಉಜ್ಜಯಿನಿ ಜಗದ್ಗುರುಗಳಿಂದ ಡಾ. ಪ್ರಭಾ ಎಸ್ಸೆಸ್ಸೆಂಗೆ ಆಶೀರ್ವಾದ



ದಾವಣಗೆರೆ, ಮಾ. 31- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಶ್ರೀ ಉಜ್ಜಯಿನಿ ಮಹಾ ಪೀಠಕ್ಕೆ ನಿನ್ನೆ ಭೇಟಿ ನೀಡಿ, ಶ್ರೀ ಪೀಠದ ಕ್ಷೇತ್ರನಾಥ ಹಾಗೂ ಜಗದ್ಗುರು ಮಹಾ ಸನ್ನಿಧಿಯವರ ಆಶೀರ್ವಾದ ಪಡೆದರು.

## ಪಂಚಮಸಾಲಿ ಪೀಠಕ್ಕೆ ಡಾ. ಪ್ರಭಾ ಭೇಟಿ



ಹರಿಹರ, ಮಾ.31- ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಅವರು ಪಂಚಮಸಾಲಿ ಗುರುಪೀಠಕ್ಕೆ ಮೊನ್ನೆ ಭೇಟಿ ಕೊಟ್ಟು, ಶ್ರೀ ವಚನಾನಂದ ಸ್ವಾಮೀಜಿಯವರಿಂದ ಆಶೀರ್ವಾದ ಪಡೆದರು. ಪಕ್ಷದ ಮುಖಂಡರಾದ ಗುತ್ತೂರು ಜಿ.ಬಿ. ಹಾಲೇಶಗೌಡ್ರು, ನಂದಿಗಾವಿ ಶ್ರೀನಿವಾಸ್, ಪ್ರಕಾಶ್ ಪಾಟೀಲ್, ಕೊಮಾರನಳ್ಳಿ ಮಂಜುನಾಥ್ ಪಾಟೀಲ್, ಟಿ.ಜೆ. ಮುರುಗೇಶಪ್ಪ, ಜಿಗಳಿ ಆನಂದಪ್ಪ, ಮಲೇಬೆನ್ನೂರು ಶಿವಕುಮಾರ್, ಮಲ್ಲೇಶ್ ಕಮಲಾಪುರ ಇತರರು ಇದ್ದರು.

## ಹರಿಹರದಲ್ಲಿಂದು ಶಿವಸಂಚಾರ ನಾಟಕ

ಸಿಟಿ ಫ್ಯಾಮಿಲಿ ಸೆಂಟರ್ ಮತ್ತು ಸಾಧು ವೀರಶೈವ ಸಮಾಜ (ಹರಿಹರ) ಇವರ ಆಶ್ರಯದಲ್ಲಿ ಇಂದಿನಿಂದ ಮೂರು ದಿನ ಶಿವಸಂಚಾರ ನಾಟಕ ಏರ್ಪಡಿಸಲಾಗಿದೆ.

ಇಂದು, ಜಯಂತ್ ಕಾಯ್ಕಿಣಿ ರಚನೆಯ ಹುಲುಗಪ್ಪ ಕಟ್ಟಿಮನಿ ನಿರ್ದೇಶನದ 'ಜೊತೆಗಿರುವನು ಚಂದಿರ' ನಾಟಕ, ನಾಳೆ ಮಂಗಳವಾರ ಕೆ.ಎಸ್. ಸಾಳಂಕಿ ರಚನೆಯ ಮಾಲತೇಶ ಆರ್. ಬಡಿಗೇರ್ ವಿನ್ಯಾಸ ನಿರ್ದೇಶನದ 'ತಾಳಿಯ ತಕರಾರು' ಹಾಗೂ ದಿನಾಂಕ 3ರ ಬುಧವಾರ ಡಾ. ನಟರಾಜ್ ಬೂದಾಳು ರಚನೆಯ ಸಿ. ಬಸವಲಿಂಗಯ್ಯ ನಿರ್ದೇಶನದ 'ಕಲ್ಯಾಣದ ಬಾಗಿಲು' ನಾಟಕಗಳು ಪ್ರದರ್ಶನಗೊಳ್ಳಲಿವೆ.

ಹರಿಹರ ವಿದ್ಯಾನಗರದ ಸಿಟಿ ಫ್ಯಾಮಿಲಿ ಸೆಂಟರ್‌ನಲ್ಲಿ ಪ್ರತಿದಿನ ಸಂಜೆ 7.30 ರಿಂದ ನಾಟಕ ಪ್ರದರ್ಶನ ಪ್ರಾರಂಭವಾಗಲಿದ್ದು, ಸಾಣೇಹಳ್ಳಿ ಶಿವಕುಮಾರ ಕಲಾ ಸಂಘದವರು ಅಭಿನಯಿಸಲಿದ್ದಾರೆ.

# ಆರೋಗ್ಯ ಮತ್ತು ಆಹಾರ ಭದ್ರತೆಗೆ ಜಲವೇ ಮೂಲ

### 'ವಿಶ್ವಜಲ ದಿನ' ಕಾರ್ಯಕ್ರಮದಲ್ಲಿ ಸಹ್ಯಾದ್ರಿ ತಾಂತ್ರಿಕ ವಿದ್ಯಾಲಯ ನಿರ್ದೇಶಕ ಡಾ. ಎಸ್.ಮಂಜಪ್ಪ




ದಾವಣಗೆರೆ,ಮಾ.31- 1993 ರಿಂದ ವಿಶ್ವ ಜಲದಿನ ಆಚರಿಸಲಾಗುತ್ತಿದೆ. ಈ ವರ್ಷ 'ಶಾಂತಿಗಾಗಿ ನೀರಿನ ಸದ್ಬಳಕೆ' ಎಂಬ ಘೋಷ ವಾಕ್ಯದೊಂದಿಗೆ ವಿಶ್ವ ಜಲದಿನವನ್ನು ಆಚರಿಸಲಾಗುತ್ತಿದೆ. ಸುಸ್ಥಿರ ನಾಗರಿಕತೆಗೆ ಆರೋಗ್ಯ ಭದ್ರತೆ, ಶಕ್ತಿಯ ಭದ್ರತೆ ಹಾಗೂ ಆಹಾರ ಭದ್ರತೆ ಎಂಬ ಮೂರು ಮಂತ್ರಗಳಿವೆ. ಈ ಮೂರರಲ್ಲೂ ನೀರು ಮಹತ್ವದ ಪಾತ್ರ ಗಳಿಸಿದೆ ಎಂದು ಮಂಗಳೂರಿನ ಸಹ್ಯಾದ್ರಿ ತಾಂತ್ರಿಕ ಮಹಾವಿದ್ಯಾಲಯದ ನಿರ್ದೇಶಕ ಡಾ. ಎಸ್.ಮಂಜಪ್ಪ ತಿಳಿಸಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಜಿಲ್ಲಾ ಬಾಲಭವನ ಸಮಿತಿ, ಸಂಯುಕ್ತವಾಗಿ ನಗರದ ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಳೆದ ವಾರ ಏರ್ಪಡಿಸಿದ್ದ ವಿಶ್ವಜಲ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾವಿಂದು ಪ್ರಯೋಗ ಶಾಲೆಯಲ್ಲಿಯೂ ನೀರನ್ನು ತಯಾರಿಸಬಹುದು. ಆದರೆ ಅದು ನಮ್ಮ ಬಳಕೆಯ ಪ್ರಮಾಣದಷ್ಟಲ್ಲ. ಆದ್ದರಿಂದ ಇರುವ ಸಂಪನ್ಮೂಲವನ್ನು ಸದ್ಬಳಕೆ ಮಾಡಿಕೊಳ್ಳೋಣ ಎಂದರು. ಸಕಲ ಜೀವಚರಗಳಿಗೆಲ್ಲ ನೀರೇ ಮೂಲಾಧಾರ. ನೀರಿಲ್ಲದೆ ನಾವ್ಯಾರು ಇಲ್ಲ. ಆದ್ದರಿಂದ ನೀರಿನ ಸದ್ಬಳಕೆ ಮತ್ತು ಜಾಗೃತಿಗಾಗಿ ವಿಶ್ವ ಜಲದಿನ ಆಚರಿಸುತ್ತಿರುವುದು ಸಂತೋಷದಾಯಕವಾಗಿದೆ ಎಂದು ತಿಳಿಸಿದರು.

ಉಪನ್ಯಾಸ ನೀಡಿದ ಕೆ.ಸಿದ್ದೇಶ್, ಭೂಮಿಯ ಮೇಲೆ ಶೇ.70% ಕ್ಕಿಂತ ಹೆಚ್ಚು ಭಾಗ ನೀರು ಆವರಿಸಿದ್ದರು. ಕುಡಿಯಲು ಮತ್ತು ಬಳಕೆಗೆ ಯೋಗ್ಯವಾದ ನೀರು 0.0003ರಷ್ಟು ಇರುವುದು ನಮಗೆಲ್ಲ ತಿಳಿದಿದೆ. ಆದ್ದರಿಂದ ನದಿ, ಕೆರೆ, ಅಂತರ್ಜಲ ಹಾಗೂ ವಾಯುಮಂಡಲ ಸಂರಕ್ಷಣೆಯತ್ತ ಗಮನ ಹರಿಸಲು ತಿಳಿಸಿದರು.

ನೀರಿನ ಕೊರತೆ ಉಂಟಾದಾಗ ನಾವು ನೀರಿನ ಲಭ್ಯತೆಯ ಹೊಸ ಆಕರದೆಡೆಗೆ ಚಿಂತಿಸುತ್ತೇವೆಯೋ ಹೊರತು ನೀರನ್ನು ಕೂಡಿಡುವ ಯಾವುದೇ ಪ್ರಯತ್ನ ಮಾಡುವುದಿಲ್ಲ. ಇದರಿಂದಾಗಿ ನಾವು ಮತ್ತಷ್ಟು ನೀರಿನ ಅಭಾವ ಎದುರಿಸುವಂತಾಗಿದೆ. ಪ್ರತಿ ಬಾರಿ ಸರ್ಕಾರ ಜಲನಿರ್ವಹಣೆಗೆ ಮೀಡಲಿಡುವ ನೂರಾರು ಕೋಟಿ ಹಣದ ಬಹುಭಾಗ ಹೊಸ ಕೊಳವೆ ಬಾವಿ ಕೊರೆಸುವುದಕ್ಕೆ ವಿನಿಯೋಗವಾಗುತ್ತದೆ. ಇದು ತಾತ್ಕಾಲಿಕ ಪರಿಹಾರ ನೀಡಿದರೂ ತೊಂದರೆ ಮಟ್ಟವನ್ನೆಚ್ಚಿಸಿ ಮುಂದೆ ಜಲಕ್ಷಾಮವನ್ನು ತರುತ್ತದೆ ಎಂದು ಎಚ್ಚರಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಡಾ.ಜೆ.ಬಿ.ರಾಜ್ ಮಾತನಾಡಿ, ಜಲಕ್ಷಾಮ ನಿವಾರಿಸುವ ಸಲುವಾಗಿ ಮೋಡ ಬಿತ್ತನೆಯಂತಹ ಕ್ರಮಗಳನ್ನು ಅನುಸರಿಸಲಾಗುತ್ತಿದೆ. ಆದರೆ ರಾಸಾಯನಿಕ ಬಳಕೆಗಳಿಂದ ತರಿಸಿದ ಮಳೆ, ಇದು ತುಂಬಾ ವೆಚ್ಚದಾಯಕವಾಗಿದೆ. ಕುಡಿಯುವ ನೀರಿಗಾಗಿ ಈಗ ವಾಯುಮಂಡಲದಲ್ಲಿನ ನೀರಾವಿ ತಣಿಸಿ, ಶುದ್ಧ ಕುಡಿಯುವ ನೀರನ್ನು ನೀಡುವ ಯಂತ್ರಗಳು ಬರುತ್ತಿವೆ. 2005ರಲ್ಲಿಯೇ ಮುಂಬೈ ನಗರದಲ್ಲಿ ವಾಟರ್ ಮೇಕರ್ ಹೆಸರಿನ ಯಂತ್ರ ಈ ಕಾರ್ಯವನ್ನು ಸಾಧಿಸಿತ್ತು. ಆದರೆ ಇದು ಸಹ ನೀರಿನ ಇನ್ನೊಂದು ಆಕರಕ್ಕೆ ಕೈಹಾಕುವ ದುಸ್ಸಾಹಸವಾಗಿದೆಯೇ ಹೊರತು, ಜಲಸಂರಕ್ಷಣೆ ಯಾಗುವುದಿಲ್ಲ ಎಂದು ವಿಷಾದಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡ್ರು ವಹಿಸಿದ್ದರು. ನಿಮ್ಹಾನ್ಸ್‌ನ ಯುವ ಸ್ಪಂದನ ಕಾರ್ಯಕ್ರಮದ ರಾಜ್ಯ ಸಂಯೋಜಕ ನಾಗರಾಜ ರಂಗಣ್ಣನವರ್, ಕರಾವಿಪ ಕಾರ್ಯದರ್ಶಿ ಎಂ.ಗುರುಸಿದ್ಧಸ್ವಾಮಿ, ಜಿಲ್ಲಾ ಬಾಲಭವನದ ಕಾರ್ಯಕ್ರಮ ಸಂಯೋಜಕರಾದ ಎಸ್. ಬಿ.ಶಿಲ್ಪ ಕಾಲೇಜಿನ ಪ್ರಾಚಾರ್ಯರಾದ ಡಾ.ಎಂ.ಪಿ.ಪ್ರೇಮ ಉಪಸ್ಥಿತರಿದ್ದರು.

# ಪುರಿ ಜಗನ್ನಾಥ ದೇವಾಲಯ ಪ್ರವೇಶ, ಹಲ್ಲೆ : ಬ್ರಿಟನ್ ನಾಗರಿಕ ವಶಕ್ಕೆ

ಭುವನೇಶ್ವರ, ಮಾ. 31 - ಪುರಿ ಜಗನ್ನಾಥ ದೇವಾಲಯ ಪ್ರವೇಶಿಸಿದ ಹಾಗೂ ದೇವಾಲಯದಲ್ಲಿ ಪೊಲೀಸರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಬ್ರಿಟಿಷ್ ವ್ಯಕ್ತಿಯೊಬ್ಬರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.

ಥಾಮಸ್ ಕ್ರೇಗ್ ಶೆಲ್ಡನ್ ಎಂಬ ಹೆಸರಿನ ಬ್ರಿಟನ್ ಪ್ರವಾಸಿಗ ಅಕ್ರಮವಾಗಿ ದೇವಾಲಯ ಪ್ರವೇಶಿಸಿದ್ದ ಎಂದು ಪೊಲೀಸರು ಹೇಳಿದ್ದಾರೆ. ದೇವಾಲಯದಲ್ಲಿ ಹಿಂದೂಯೇತರರ ಪ್ರವೇಶಕ್ಕೆ ಅವಕಾಶ ಇಲ್ಲ. ಈ ಹಿನ್ನೆಲೆಯಲ್ಲಿ ವಾಪಸ್ ತೆರಳುವಂತೆ ಅವರಿಗೆ ತಿಳಿಸಲಾಗಿತ್ತು. ಆಗ ಥಾಮಸ್ ಪೇದೆಗಳ ಮೇಲೆ ಹಲ್ಲೆ ನಡೆಸಿರುವುದಾಗಿ ಪೊಲೀಸರು ಹೇಳಿದ್ದಾರೆ.

ಕಳೆದ ವಾರವಷ್ಟೇ ದೇವಾಲಯ ಪ್ರವೇಶಿಸಿದ್ದ ಪೋಲ್ಯಾಂಡ್ ಮಹಿಳೆಯನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು. ಅದಕ್ಕೂ ಮುಂಚೆ ಕೆಲ ಬಾಂಗ್ಲಾ ದೇಶೀಯರನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು.

## ಮಲೇಬೆನ್ನೂರು ಪುರಸಭೆ ಆವರಣದಲ್ಲಿ ಮತದಾನ ಜಾಗೃತಿ ಅರಿವು ಕಾರ್ಯಕ್ರಮ

ಮಲೇಬೆನ್ನೂರು, ಮಾ.27- ಇಲ್ಲಿನ ಪುರಸಭೆ ಕಚೇರಿಯ ಆವರಣದಲ್ಲಿ 'ಡೇ - ನಲ್ಮ್' ಯೋಜನೆಯಡಿ ರಚಿಸಲ್ಪಟ್ಟಿರುವ ಸ್ವ-ಸಹಾಯ ಸಂಘದ ಸದಸ್ಯರಿಂದ ಲೋಕಸಭಾ ಚುನಾವಣೆ - 2024ರ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಮತದಾನ ಜಾಗೃತಿಯ ಅರಿವು ಮೂಡಿಸುವ ಸಲುವಾಗಿ ಬುಧವಾರ ರಂಗೋಲಿ ಬಿಡಿಸುವ ಮೂಲಕ ಮತದಾನದ ಜಾಗೃತಿಯ ಬಗ್ಗೆ ವಿವಿಧ ಘೋಷವಾಕ್ಯಗಳೊಂದಿಗೆ ಕಾರ್ಯಕ್ರಮ ನಡೆಸಲಾಯಿತು. ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್, ಅಧಿಕಾರಿಗಳಾದ ದಿನಕರ್, ಪ್ರಭು, ಉಮೇಶ್, ನವೀನ್, ಶಿವರಾಜ್, ಮಂಜುನಾಥ್ ಹಾಗೂ ಸಿಬ್ಬಂದಿ ವರ್ಗದವರು ಈ ವೇಳೆ ಹಾಜರಿದ್ದು ರಂಗೋಲಿ ಬಿಡಿಸಿದವರಿಗೆ ಬಹುಮಾನ ವಿತರಿಸಿದರು.

### ಜಾತ್ರೆ : ಇಂದು ಸಾಂಸ್ಕೃತಿಕ ಕಾರ್ಯಕ್ರಮ

ದುಗ್ಗಮ್ಮ ಜಾತ್ರೆ ಪ್ರಯುಕ್ತ ದೇವಸ್ಥಾನದ ಮುಂಭಾಗದಲ್ಲಿ ಇಂದು ರಾತ್ರಿ 8 ರಿಂದ ಸಾಂಸ್ಕೃತಿಕ ಕಾರ್ಯ ಕ್ರಮಗಳು ನಡೆಯಲಿವೆ. ನಾಡಿನ ವಿವಿಧ ಭಾಗಗಳ ಪ್ರಸಿದ್ಧ ಕಲಾವಿದರ ತಂಡ ಈ ಕಾರ್ಯಕ್ರಮವನ್ನು ನಡೆಸಿಕೊಡಲಿದೆ.

## ಓದುಗರ ಪತ್ರ

### ರಾಯಣ್ಣ ವೃತ್ತದಲ್ಲಿ ರಸ್ತೆ ದುರಸ್ತಿ ಮಾಡಿ

**ಮಾನ್ಯರೇ,**

ನಗರದ ರಿಂಗ್ ರಸ್ತೆ, ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ರಸ್ತೆಗೆ ಅಡ್ಡಲಾಗಿ ಯಾವುದೋ ಪೈಪ್ ಲೈನ್ ಹಾಕಲು ನೆಲವನ್ನು ಅಗೆದು ಅದನ್ನು ಮುಚ್ಚಿರುವುದಿಲ್ಲ. ಇದರಿಂದ ಇಲ್ಲಿ ಅಡ್ಡಾಡುವ ವಾಹನ ಸವಾರರಿಗೆ ದೊಡ್ಡ ಸವಾಲಾಗಿದೆ.

ಗ್ರೀನ್ ಸಿಗ್ನಲ್ ಆದ ಕೂಡಲೇ ಫ್ಲೈ-ಓವರ್ ಕಡೆಯಿಂದ ನೇರವಾಗಿ ಬರುವ ವಾಹನ ಸವಾರರಿಗೆ ರಸ್ತೆ ಕತ್ತರಿಸಿದಂತಿರುವ ಈ ಗುಂಡಿ ದೂರದಿಂದ ಕಾಣುವುದಿಲ್ಲ. ಅದನ್ನು ಗಮನಿಸದೇ ವೇಗವಾಗಿ ಬರುತ್ತಾರೆ. ಗುಂಡಿ ಕಂಡ ಕೂಡಲೇ ಗಕ್ಕನೆ ಬ್ರೇಕ್ ಹಾಕಿದರೆ, ಹಿಂದಿನಿಂದ ಬರುವ ವಾಹನಗಳು ಡಿಕ್ಕಿ ಹೊಡೆಯಬೇಕಾಗುತ್ತದೆ. ಈ ಸಮಸ್ಯೆಯೇನು ಇಂದು-ನಿನ್ನೆಯದಲ್ಲ. ವರ್ಷವೇ ಕಳೆಯುತ್ತಾ ಬಂದಿದೆ. ಆದರೂ ಇದು ಸಂಬಂಧಿಸಿದವರ ಗಮನಕ್ಕೆ ಬಾರದಿರುವುದು ಶೋಚನೀಯ ಸಂಗತಿ. ಅದೂ ಹೆದ್ದಾರಿಯಂತಹ ಜನ-ವಾಹನ ನಿಬಿಡ ವೃತ್ತದಲ್ಲಿ.

**ನೊಂದ ವಾಹನ ಸವಾರ,** ದಾವಣಗೆರೆ.

### ಗಾಜಿನ ಮನೆ ಸ್ವಚ್ಛತೆ ಕಾಪಾಡಿ



**ಮಾನ್ಯರೇ,**

ಗಾಜಿನ ಮನೆಯೊಳಗೆ ಕಾಲಿಟ್ಟರೆ ಸಾಕು ಸ್ವಚ್ಛತೆಯು ಮಾಯವಾಗಿರುವುದು ಕಂಡು ಬರುತ್ತದೆ. ಸಮರ್ಪಕವಾದ ರೀತಿಯಲ್ಲಿ ಸ್ವಚ್ಛತೆ ಕಾಪಾಡಿಕೊಂಡು ಬರುವುದರಲ್ಲಿ ವಿಫಲವಾಗಿದೆ ಎಂಬುದು ಗೋಚರವಾಗುತ್ತದೆ.

ಪ್ರವೇಶ ದರ 20 ರೂಪಾಯಿಗಳನ್ನು ಪಡೆಯುತ್ತಿರುವ ಸಂದರ್ಭದಲ್ಲಿಯೂ ತುಕ್ಕು ಹಿಡಿದಿರುವ ಗಿಡಮರಗಳ ಪರಿಚಯವುಳ್ಳ ಫಲಕಗಳು, ನೀರು ಕುಡಿದು ಎಸೆದ ಪ್ಲಾಸ್ಟಿಕ್ ಬಾಟಲಿಗಳು, ಸ್ಪ್ರಿಂಕ್ಲರ್ ನೀರು ಪೂರ್ಣ ಪ್ರಮಾಣದಲ್ಲಿ ಗಿಡಗಳ ಮೇಲೆ ಚೆಲ್ಲದೇ ಇರುವುದು, ಬಹಳಷ್ಟು ಕಡೆ ಕಸಗಳನ್ನು ಹಾಗೆಯೇ ಬಿಟ್ಟಿರುವುದು, ಗಾಜಿನ ಮನೆಯೊಳಗೆ ನೆಲವನ್ನು ಶುದ್ಧಿಗೊಳಿಸದೇ ಧೂಳಿನ ಹೆಜ್ಜೆಗುರುತುಗಳು ಎಲ್ಲಾ ಕಂಡು ಬಂದು ಗಾಜಿನ ಮನೆಯ ಅಭಿಮಾನಿ ವರ್ಗಕ್ಕೆ ಅಥವಾ ಪ್ರೇಕ್ಷಕರಾಗಿ ಕಾಣಲು ಬರುವ ಸಾರ್ವಜನಿಕರಿಗೆ ಮನಸೂರೆಗೊಳಿಸದಂತೆ ಅಲ್ಲಿಯ ಪರಿಸರವು ನಕಾರಾತ್ಮಕವಾಗಿ ಕಾಣುತ್ತದೆ.

ಹಾಗೆಯೇ ಸಾರ್ವಜನಿಕರು ಕೂಡ ಗಾಜಿನ ಮನೆಯ ಕಡೆಗೆ ಹೋದಾಗ ಸ್ವಚ್ಛತೆಯನ್ನು ಕಾಪಾಡುವಲ್ಲಿ ಗಮನ ವಹಿಸಬೇಕಿದೆ. ಯಾವುದೇ ಒಂದು ಯೋಜನೆಯನ್ನು ತಂದು, ನಿರ್ಮಿಸುವುದು ಸುಲಭದ ಮಾತಲ್ಲ. ಶಿಸ್ತನ್ನು ಕಾಪಾಡಲು ಅಗತ್ಯ ಇರುವ ಕಡೆಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಬೇಕು. ಜನಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ಪ್ರತಿ ಭಾನುವಾರದಂದು ಯುವ ಸಮೂಹಕ್ಕೆ ವೇದಿಕೆಯನ್ನು ಅಲ್ಲಿ ಕಲ್ಪಿಸಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳು ಆಗುತ್ತಾ ಇದ್ದಾಗ ಭೇಟಿ ಮಾಡುವವರ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾಗುತ್ತದೆ. ದಯವಿಟ್ಟು ಈ ಕೂಡಲೇ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನ ವಹಿಸಬೇಕು.

**- ವಾದಿರಾಜ ಭಟ್ ವೈ,** ವಕೀಲರು, ದಾವಣಗೆರೆ.

## ಖೇಲೋ ಇಂಡಿಯಾ ಪ್ರತಿಭೆಗಳ ಆಯ್ಕೆ

ದಾವಣಗೆರೆ, ಮಾ. 31 - ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರ (ಬೆಂಗಳೂರು)ದಲ್ಲಿನ ತರಬೇತಿ ಕೇಂದ್ರಕ್ಕೆ ಅಥ್ಲೆಟಿಕ್ಸ್ ಹಾಗೂ ಈಜು ಕ್ರೀಡೆಗಳಲ್ಲಿ ಪ್ರತಿಭಾನ್ವಿತರಾಗಿರುವ ಹಾಗೂ ಪ್ರತಿಭೆಗಳನ್ನು ಆಯ್ಕೆ ಮಾಡುವ ಸಲುವಾಗಿ ಜಯ ಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ತರಬೇತಿ ಕೇಂದ್ರ ಕ್ರೀಡಾ ಶಾಲೆ (ಬೆಂಗಳೂರು)ಯಲ್ಲಿ ಇದೇ ದಿನಾಂಕ 15, 16 ರಂದು ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು. ಆಸಕ್ತ ಅರ್ಹ ಕ್ರೀಡಾಪಟುಗಳು ಆಯ್ಕೆಯಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ದೂ.ಸಂ: 08192-237480 ಸಂಪರ್ಕಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮೀಬಾಯಿ ತಿಳಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ಯೋಗ ಶಿಬಿರ

ಆಫೀಸರ್ಸ್‌ಕ್ಲಬ್, ಜಿಲ್ಲಾ ಯೋಗ ಒಕ್ಕೂಟ ಇವರ ಸಂಯುಕ್ತಾಶ್ರಯದಲ್ಲಿ ಇಂದಿನಿಂದ ಇದೇ ದಿನಾಂಕ 15 ರವರೆಗೆ ಪ್ರತಿದಿನ ಬೆಳಿಗ್ಗೆ 6.15 ರಿಂದ ಯೋಗ ಶಿಬಿರ ನಡೆಯಲಿದೆ. ಜಿಲ್ಲಾಧಿಕಾರಿ ಡಾ. ವೆಂಕಟೇಶ್.ಎಂ.ವಿ ಶಿಬಿರ ಉದ್ಘಾಟಿಸಲಿದ್ದಾರೆ. ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ್ ರಾಯ್ಕರ್ ಅಧ್ಯಕ್ಷತೆ ವಹಿಸುವರು. ವಿವರಕ್ಕೆ ಸಂಪರ್ಕಿಸಿ : 8197843543, 9035551568.

## ಅಮೃತ ಪಟೇಲ್ ನಿಧನಕ್ಕೆ ಮುರುಘಾ ಶರಣರ ಸಂತಾಪ

ದಾವಣಗೆರೆ, ಮಾ. 31 - ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ, ಶ್ರೀ ಮುರುಘಾ ಮಠದ ಉಪಾಧ್ಯಕ್ಷರಾಗಿದ್ದ ದಿ. ಪ್ರೊ. ಎಸ್.ಹೆಚ್. ಪಟೇಲ್ ಅವರ ಧರ್ಮಪತ್ನಿ ಶ್ರೀಮತಿ ಅಮೃತ ಪಟೇಲ್ ಅವರ ನಿಧನಕ್ಕೆ ಶ್ರೀ ಶಿವಮೂರ್ತಿ ಮುರುಘಾ ಶರಣರು ಸಂತಾಪ ವ್ಯಕ್ತಪಡಿಸಿದ್ದಾರೆ. ಶ್ರೀಗಳು, ಮೃತರ ನಿವಾಸಕ್ಕೆ ಭೇಟಿ ನೀಡಿ ಅಂತಿಮ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ, ಎಂ. ಜಯಕುಮಾರ್ ಮೊದಲಾದವರಿದ್ದರು.

## ನಗರದಲ್ಲಿ ನಾಳೆ ಕ್ರಿಕೆಟ್ ತರಬೇತಿ ಶಿಬಿರ

ದಾವಣಗೆರೆ, ಮಾ. 31 - ಕ್ರಿಕೆಟ್ ಅಕಾಡೆಮಿಯ 23ನೇ ವರ್ಷದ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರವು ನಾಡಿದ್ದು ದಿನಾಂಕ 2 ರಂದು ಬೆಳಗ್ಗೆ 6.30ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರಾರಂಭವಾಗಲಿದೆ.

ದಾವಣಗೆರೆ ಕ್ರಿಕೆಟ್ ಅಕಾಡೆಮಿ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಶಿಬಿರವನ್ನು ಉದ್ಘಾಟಿಸಲಿದ್ದಾರೆ. ಶಿಬಿರದಲ್ಲಿ 6 ರಿಂದ 18 ವರ್ಷದ ಆಸಕ್ತ ಕ್ರೀಡಾಪಟುಗಳಿಗೆ ಬಿಸಿಸಿಐ ಹಾಗೂ ಕೆ.ಎಸ್. ಸಿ.ಎ ಇಂದ ಮಾನ್ಯತೆ ಪಡೆದ ಕೋಚ್‌ಗಳಿಂದ ತರಬೇತಿ ನೀಡಲಾಗುವುದು. ಬೇಸಿಕ್‌ನಿಂದ ಅಡ್ವಾನ್ಸ್‌ವರೆಗೂ ಶಿಬಿರದಲ್ಲಿ ತರಬೇತಿ ನೀಡಲಾಗುವುದು.

ಜೊತೆಗೆ ಫಿಟ್ನೆಸ್ ಹಾಗೂ ವ್ಯಕ್ತಿತ್ವ ವಿಕಸನದ ಬಗ್ಗೆಯೂ ತರಬೇತಿ ನೀಡಲಾಗುವುದು. ಬೇರೆ ಬೇರೆ ತಂಡಗಳೊಂದಿಗೆ ಮ್ಯಾಚ್‌ಗಳನ್ನು ಆಯೋಜಿಸಲಾಗಿದೆ. ಏಪ್ರಿಲ್ 2 ರಿಂದ ಮೇ 30ರವರೆಗೆ ನಡೆಯುವ ಈ ಕ್ರಿಕೆಟ್ ತರಬೇತಿ ಶಿಬಿರದಲ್ಲಿ ಹೆಸರಾಂತ ಕ್ರಿಕೆಟ್ ಕೋಚ್‌ಗಳು ವಿಶೇಷ ತರಬೇತಿಯನ್ನು ನೀಡಲಿದ್ದಾರೆ.

ಈ ಕ್ರಿಕೆಟ್ ತರಬೇತಿ ಶಿಬಿರದ ಉಸ್ತುವಾರಿಯನ್ನು ಬಿಸಿಸಿಐ ಲೆವೆಲ್ ಎ ಕೋಚ್ ಗೋಪಾಲಕೃಷ್ಣ ಮತ್ತು ಕೆಎಸ್‌ಸಿಎ ಲೆವೆಲ್ ಓ ಕೋಚ್ ತಿಮ್ಮೇಶ್ ಅವರು ನಿರ್ವಹಿಸಲಿದ್ದಾರೆ. ವಿವರಕ್ಕೆ ಗೋಪಾಲಕೃಷ್ಣ (78996 10318), ಗುರು ಅಂಬರ್ಕರ್ (99645 99160) ತಿಮೇಶ್ (98804 4060) ಅವರನ್ನು ಸಂಪರ್ಕಿಸಬಹುದು.

## ಅಧಿಕಾರದಾಸೆ ಮುಗಿದಿದೆ, ಜನರಿಗಾಗಿ ಕಾಂಗ್ರೆಸ್ ಸೇರ್ಪಡೆ : ಆರ್. ಶಂಕರ್



ರಾಣೇಬೆನ್ನೂರು, ಮಾ. 31 - ಶಾಸಕ, ಸಚಿವನಾಗಿದ್ದೆ, ಮೇಲ್ಮನೆ ಸದಸ್ಯನಾಗಿದ್ದೆ, ನನಗೀಗ ಯಾವುದೇ ಅಧಿಕಾರದ ಆಸೆ ಇಲ್ಲಾ, ನನ್ನನ್ನು ಶಾಸಕನನ್ನಾಗಿ ಮಾಡಿದ ಜನರಿಗೆ ಯಾವುದೇ ಅನ್ಯಾಯವಾಗಬಾರದು. ನನ್ನ ಕಷ್ಟ ಕಾಲದಲ್ಲೂ ನನ್ನ ಜೊತೆಗಿರುವ ಜನರಿಗಾಗಿ ಕಾಂಗ್ರೆಸ್ ಪಕ್ಷ ಸೇರುತ್ತಿದ್ದೇನೆ ಎಂದು ಮಾಜಿ ಸಚಿವ ಆರ್. ಶಂಕರ್ ಹೇಳಿದರು.

ಅವರಿಂದು ತಮ್ಮ ನಿವಾಸದಲ್ಲಿ ನಡೆಸಿದ ತಮ್ಮ ಅಭಿಮಾನಿಗಳ ಸಭೆ ನಂತರ ಪತ್ರಿಕೆಗಳಿಗೆ ಹೇಳಿಕೆ ನೀಡಿದರು.

ಕಾಂಗ್ರೆಸ್ ಪಕ್ಷ ನನ್ನನ್ನು ಉಪಮಹಾಪೌರ, ಸಚಿವನನ್ನಾಗಿ ಮಾಡಿದೆ. ನನ್ನ ಮನಸ್ಸು ಕಾಂಗ್ರೆಸ್ ನತ್ತ ಎಳೆಯುತ್ತಲಿತ್ತು. ಈಗ ನನ್ನ ಜನರು ಸಹ ಕಾಂಗ್ರೆಸ್ ಸೇರುವಂತೆ ಹೇಳಿದ್ದಾರೆ. ನಾನು ಯಾವುದೇ ಕರಾರುಗಳಿಲ್ಲದೇ ಕಾಂಗ್ರೆಸ್ ಸೇರುತ್ತೇನೆ. ಹಿರಿಯರಾದ ಕೆ.ಬಿ. ಕೋಳಿವಾಡ ಮತ್ತು ನನ್ನ ಮಧ್ಯೆ ಭಿನ್ನಾಭಿಪ್ರಾಯವಿತ್ತು ಬೇರೆಯಾಗಿದ್ದೆವು. ಈಗ ಒಂದೇ ಮನೆಯಲ್ಲಿರುತ್ತೇವೆ, ಹೊಂದಾಣಿಕೆಯಿಂದ ಜನರ ಕೆಲಸ ಮಾಡುತ್ತೇವೆ ಎಂದು ಶಂಕರ್ ಹೇಳಿದರು.

ಬಿಜೆಪಿ ಸರ್ಕಾರ ರಚನೆಯಲ್ಲಿ ನನ್ನ ಸಹಕಾರ ಪಡೆದು ನನಗೆ ಅನ್ಯಾಯ ಮಾಡಿದರು. ಜನರಿಗಾಗಿ ಅವರ ಜೊತೆ ಹೊಂದಿಕೊಂಡು ಕೆಲಸ ಮಾಡಿದರೂ ನನಗೆ ಬಿಜೆಪಿಯವರು ಅನ್ಯಾಯ ಮಾಡಿದರು. ಶೇ. 30% ರಷ್ಟು ಯಡಿಯೂರಪ್ಪ ಅನ್ಯಾಯ ಮಾಡಿದರೆ, ಇಲ್ಲಿನ ಶಾಸಕ ಅರುಣಕುಮಾರ ಪೂಜಾರ್ ಶೇ. 70% ರಷ್ಟು ಅನ್ಯಾಯ ಮಾಡಿದರು ಎಂದು ಹೇಳಿದ ಆರ್. ಶಂಕರ್ ಜೊತೆ ಮುಖಂಡರಾದ ರತ್ನಾಕರ ಕುಂದಾಪುರ, ರಾಜು ಅಡಿವೆಪ್ಪನವರ, ಎಂ.ಬಿ. ಜೋಗಾರ ಮತ್ತಿತರರಿದ್ದರು.

**ಊರಿಗೆ ಬೇಡಾದ ಅರುಣ :** ನನ್ನ ಜನ ನನ್ನ ಬಳಿ ಇದ್ದಾರೆ. ನನ್ನನ್ನು ಯಾರೂ ಬಿಟ್ಟು ಹೋಗಿಲ್ಲ. ಯಾರೋ ಒಂದಿಬ್ಬರು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಶಾಸಕನಾಗಿ ಮೂರು ವರ್ಷಗಳಲ್ಲಿ ಜನರಿಂದ ದೂರವಾದ ಅರುಣಕುಮಾರ ಪೂಜಾರ ಅವರನ್ನು ಬಿಜೆಪಿ ಜಿಲ್ಲಾಧ್ಯಕ್ಷ ಮಾಡಿದ್ದಾರೆ. ಊರಿಗೆ ಬೇಡಾದವರನ್ನು ಅಧ್ಯಕ್ಷನನ್ನಾಗಿ ಮಾಡಿರುವುದು ಬಿಜೆಪಿ ಅವನತಿಯ ಮುನ್ಸೂಚನೆ ಎಂದು ಶಂಕರ್ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

## ಮಹಮದ್ ರಫಿ ಅವರಿಗೆ ಚಿನ್ನದ ಪದಕ

ದಾವಣಗೆರೆ, ಮಾ.31- ಉಡುಪಿ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಸಹಯೋಗದಲ್ಲಿ ಎರಡನೆಯ ದಕ್ಷಿಣ ಭಾರತ ಮಾಸ್ಟರ್ಸ್ ಅಥ್ಲೆಟಿಕ್ಸ್ ಓಪನ್ ಚಾಂಪಿಯನ್‌ಶಿಪ್-2024 ಪಂದ್ಯಾವಳಿಯಲ್ಲಿ ನಗರದ ಬಿಎಸ್‌ಎಫ್ ಮಾಜಿ ಯೋಧ ಮಹಮದ್ ರಫಿ 400 ಮೀ. ಹರ್ಡಲ್ಸ್ ಓಟದಲ್ಲಿ ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕ ಗಳಿಸಿದ್ದಾರೆ. ಅಲ್ಲದೇ 10 ಸಾವಿರ ಮೀಟರ್ ಓಟದಲ್ಲಿ 4ನೇ ಸ್ಥಾನ, 800 ಮೀ. ಓಟದಲ್ಲಿ 5ನೇ ಸ್ಥಾನ ಪಡೆದಿದ್ದಾರೆ.

ಆ ಮೂಲಕ ಜೂನ್‌ನಲ್ಲಿ ಶ್ರೀಲಂಕಾದಲ್ಲಿ ನಡೆಯಲಿರುವ ಭಾರತ ಮತ್ತು ಶ್ರೀಲಂಕಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಡುಯಲ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಭಾಗವಹಿಸುವ ಅರ್ಹತೆ ಪಡೆದಿರುವ ರಫಿ ಅವರನ್ನು ದಾವಣಗೆರೆ ಪ್ಯಾರಾ ಮಿಲಿಟರಿ ಸಂಘವು ಅಭಿನಂದಿಸಿದೆ.

## ಎಂ.ಪಿ.ಲತಾ, ಪ್ರಭಾ ಜೋಡೆತ್ತಾಗಿ ಅಭಿವೃದ್ಧಿ ಕಾರ್ಯ

ಹರಪನಹಳ್ಳಿ, ಮಾ. 31 - ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ ಅವರಿಗೆ ಮತ ನೀಡಿ ಗೆಲ್ಲಿಸುವುದರೊಂದಿಗೆ ಶಾಸಕರಾದ ಎಂ.ಪಿ. ಲತಾ ಹಾಗೂ ಡಾ. ಪ್ರಭಾ ಮಲ್ಲಿಕಾರ್ಜುನ್ ಜೋಡೆತ್ತಾಗಿ ಅಭಿವೃದ್ಧಿ ಕೆಲಸ ಮಾಡಲು ಅವಕಾಶ ನೀಡಬೇಕು ಎಂದು ರೇಷ್ಮೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಡಿ. ಬಸವರಾಜ ಹೇಳಿದರು.

ಡಾ. ಪ್ರಭಾ ಮಲ್ಲಿಕಾರ್ಜುನ್ 1997ರಲ್ಲಿ ಶಾಮನೂರು ಕುಟುಂಬದ ಸೊಸೆಯಾಗಿ ಬಂದ ನಂತರ ಎಲೆಮರೆ ಕಾಯಿಯಾಗಿ ಕಾಂಗ್ರೆಸ್ ಪಕ್ಷಕ್ಕೆ ಕೆಲಸ ಮಾಡಿದ್ದಾರೆ ಎಂದು ಅವರು ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ನಿನ್ನೆ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

## ಶ್ರೀ ರಾಮಕೃಷ್ಣ ಇಂಟರ್‌ನ್ಯಾಷನಲ್‌ನಲ್ಲಿ ಹೋಳಿ ಸಂಭ್ರಮ



ದಾವಣಗೆರೆ, ಮಾ. 31 - ನಗರದ ಶ್ರೀ ರಾಮಕೃಷ್ಣ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಶಾಲಾ ಪರೀಕ್ಷೆಗಳು ಮುಗಿದ ನಂತರ ವಿವಿಧ ರೀತಿಯ ಬಣ್ಣಗಳಿಂದ ಶಾಲಾ ಮಕ್ಕಳು, ಪೋಷಕರು ಹೋಳಿ ಆಡಿ ಕುಣಿದು ಸಂಭ್ರಮಿಸಿದರು.

## ನಗರದಲ್ಲಿ ಇಂದು ಇಂಡಿಯಾ ಒಕ್ಕೂಟದ ಮೆರವಣಿಗೆ

ಕಾಂಗ್ರೆಸ್, ಆಮ್ ಆದ್ಮಿ ಪಕ್ಷ, ಸಿಪಿಐ ಪಕ್ಷಗಳು ಸೇರಿದಂತೆ ವಿವಿಧ ಪಕ್ಷಗಳ ಇಂಡಿಯಾ ಒಕ್ಕೂಟದ ವತಿಯಿಂದ ಇಂದು ನಗರದಲ್ಲಿ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 11 ಗಂಟೆಗೆ ಮಹಾತ್ಮ ಗಾಂಧಿ ವೃತ್ತದಿಂದ ಬೃಹತ್ ಮೆರವಣಿಗೆ ಆರಂಭಗೊಂಡು, ಸಾರ್ವಜನಿಕ ಸಭೆ ನಡೆಯುವ ಶಿವಯೋಗಿ ಮಂದಿರದ ಆವರಣದಲ್ಲಿ ಅಂತ್ಯಗೊಳ್ಳಲಿದೆ.

ಮೆರವಣಿಗೆ ನಂತರ ಸಾರ್ವಜನಿಕ ಸಮಾರಂಭ ನಡೆಯಲಿದೆ.

## ಇಬ್ಬರು ಕಳ್ಳರ ಬಂಧನ: 7 ಲಕ್ಷ ಮೌಲ್ಯದ ಲಾರಿ ವಶ

ದಾವಣಗೆರೆ,ಮಾ.31- ನಗರದ ಬೂದಾಳ್ ರಸ್ತೆಯಲ್ಲಿರುವ ಮೆಹಕ್ ಶಾದಿ ಮಹಲ್ ಪಕ್ಕದ ಖಾಲಿ ಜಾಗದಲ್ಲಿ ನಿಲ್ಲಿಸಲಾಗಿದ್ದ ಫಜ್ಲೂರ್ ರೆಹಮಾನ್ ಎಂಬುವರ 7ಲಕ್ಷ ರೂ. ಮೌಲ್ಯದ ಲಾರಿಯನ್ನು ಕಳ್ಳತನ ಮಾಡಿದ್ದ ಇಬ್ಬರನ್ನು ಬಂಧಿಸಿರುವ ಗಾಂಧಿನಗರ ಪೊಲೀಸರು ಲಾರಿಯನ್ನು ವಶಪಡಿಸಿಕೊಂಡಿದ್ದಾರೆ.

ಆಜಾದ್ ನಗರ (ಗಾಂಧಿನಗರ) ವೃತ್ತದ ಪೊಲೀಸ್ ವೃತ್ತ ನಿರೀಕ್ಷಕ ನಹೀಂ ಅಹಮದ್ ಟಿ.ಆರ್, ಹಾಗೂ ಸಿಬ್ಬಂದಿಯವರು ಮೊಹಮದ್ ಸಾಧಿಕ್ ಮತ್ತು ವಾಸಿಂ ಅಕ್ರಮ್‌ರನ್ನು ಬಂಧಿಸಿ, ಕೆ.ಎ-16-ಎ-8280ನೇ 10 ಗಾಲಿಯ ಅಶೋಕ್ ಲೇಲ್ಯಾಂಡ್ ಕಂಪನಿಯ ಲಾರಿ ಹಾಗೂ ಕೃತ್ಯ ಕಾಲಕ್ಕೆ ಉಪಯೋಗಿಸಿದ 1,30,000/-ರೂ ಬೆಲೆ ಬಾಳುವ ಬಿಳಿ ಮತ್ತು ಕಾಫಿ ಕಲರ್‌ನ ಸ್ಕೂಟರ್‌ನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಹಾಲಿ ನ್ಯಾಯಾಂಗ ಬಂಧನದಲ್ಲಿರುತ್ತಾರೆ.







## ಪೊಲೀಸ್ ಇಲಾಖೆಯಲ್ಲಿ ವಯೋ ನಿವೃತ್ತಿ ಹೊಂದಿದ ಅಧಿಕಾರಿಗಳಿಗೆ ಬೀಳ್ಕೊಡುಗೆ

ದಾವಣಗೆರೆ, ಮಾ. 31- ಪೊಲೀಸ್ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಇಂದು ವಯೋ ನಿವೃತ್ತಿ ಹೊಂದಿದ ಮೂವರು ಅಧಿಕಾರಿಗಳಿಗೆ ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಏರ್ಪಾಡಾಗಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಆತ್ಮೀಯವಾಗಿ ಗೌರವಿಸಿ, ಬೀಳ್ಕೊಡಲಾಯಿತು.

ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಿಎಸ್ಐ ಚಂದ್ರು, ಡಿಎಆರ್ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಆರ್ ಎಸ್ ಐ ಆರ್. ಮಂಜಪ್ಪ ರೆಡ್ಡಿ, ಬಡಾವಣೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಎಸ್ಐ ಜೆ. ಶಿವಪ್ಪ ಅವರುಗಳನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಅವರು ಸನ್ಮಾನಿಸಿ, ನಿವೃತ್ತಿ ಜೀವನಕ್ಕೆ ಶುಭ ಕೋರಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ಕಛೇರಿಯ ಸಹಾಯಕ ಆಡಳಿತಾಧಿಕಾರಿ ಮೆಹಬೂಬ್ ಎ. ಹಾಗೂ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ಮತ್ತು ನಿವೃತ್ತರ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.





## 'ಜನತಾವಾಣಿ'ಯ ಮನೋಹರಗೆ ಕೆಯುಡಬ್ಲ್ಯುಜೆ ದತ್ತಿ ಪ್ರಶಸ್ತಿ



ರಾಣೇಬೆನ್ನೂರು, ಮಾ.31- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಕೊಡಮಾಡುವ ವಾರ್ಷಿಕ ದತ್ತಿ ನಿಧಿ ಪ್ರಶಸ್ತಿಗೆ ರಾಣೇಬೆನ್ನೂರು ತಾಲ್ಲೂಕಿನ 'ಜನತಾವಾಣಿ' ಹಿರಿಯ ವರದಿಗಾರ ಮನೋಹರ ಮಲ್ಲಾಡದ ಭಾಜನರಾಗಿದ್ದಾರೆ.

**ಚಿತ್ರದುರ್ಗದಲ್ಲಿ ಇಂದು ಪ್ರಶಸ್ತಿ ಪ್ರದಾನ**

ಮಾಧ್ಯಮ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಗಣನೀಯ ಸೇವೆಗೆ ಕೆಯುಡಬ್ಲ್ಯುಜೆ ರಾಜ್ಯ ಘಟಕವು ಪ್ರತಿ ವರ್ಷ ದತ್ತಿ ನಿಧಿ ಪ್ರಶಸ್ತಿ ನೀಡುತ್ತಿದ್ದು, ಪ್ರಸಕ್ತ ಸಾಲಿನ ಪ್ರಶಸ್ತಿ ಪಟ್ಟಿಯನ್ನು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಬಿಡುಗಡೆ ಮಾಡಿದ್ದಾರೆ.

ಪ್ರಶಸ್ತಿಯು ತಲಾ 5 ಸಾವಿರ ನಗದು, ಪ್ರಶಸ್ತಿ ಫಲಕ ಮತ್ತು ಗೌರವ ಪುರಸ್ಕಾರಗಳನ್ನು ಹೊಂದಿದ್ದು, ಮನೋಹರ ಮಲ್ಲಾಡದ ಅವರಿಗೆ ಪಿ. ರಾಮಯ್ಯ ಪ್ರಶಸ್ತಿ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ನಾಳೆ ಏಪ್ರಿಲ್ 1ರಂದು ಚಿತ್ರದುರ್ಗದಲ್ಲಿ ಏರ್ಪಾಡಾಗಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ತಗಡೂರು ವಿವರಿಸಿದ್ದಾರೆ.

## ಸ್ವಂತ ಕಟ್ಟಡದಲ್ಲೇ ಶಾಖೆ ಆರಂಭಿಸಲು ದಾವಣಗೆರೆ ಅರ್ಬನ್ ಬ್ಯಾಂಕ್ ಸಿದ್ಧತೆ

ದಾವಣಗೆರೆ, ಮಾ.31- ಪ್ರಧಾನ ಕಚೇರಿಯನ್ನು ಒಳಗೊಂಡಂತೆ ಒಟ್ಟು ಆರು ಶಾಖೆಗಳನ್ನು ಹೊಂದಿರುವ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ತನ್ನ 7ನೇ ಶಾಖೆಯನ್ನು ಆರಂಭಿಸುವ ನಿಟ್ಟಿನಲ್ಲಿ ಸಕಲ ಸಿದ್ಧತೆಯನ್ನು ಕೈಗೊಂಡಿದೆ.

ನೂತನ ಶಾಖೆಯನ್ನು ಸ್ವಂತ ಕಟ್ಟಡದ ಜೊತೆ, ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಪ್ರಾರಂಭಿಸಲಾಗುತ್ತದೆ. ನಿಟುವಳ್ಳಿಯ ಹೆಚ್.ಕೆ.ಆರ್. ಸರ್ಕಲ್ ಬಳಿ ಈ ಶಾಖೆ ಶೀಘ್ರದಲ್ಲೇ ಸಾರ್ವಜನಿಕರ ಸೇವೆಗೆ ಸಮರ್ಪಣೆಗೊಳ್ಳಲಿದೆ.

ಈ ಸಂಬಂಧ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಬಿ.ಸಿ. ಉಮಾಪತಿ ಮತ್ತು ಉಪಾಧ್ಯಕ್ಷ ಟಿ.ಎಸ್. ಜಯರುದ್ರೇಶ್ ಅವರುಗಳು ಇಂದು ನಡೆದ ಸರಳ ಸಮಾರಂಭದಲ್ಲಿ ನೂತನ ಕಟ್ಟಡದ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದರು.



ಪೂಜೆಯ ನಂತರ ಔಪಚಾರಿಕವಾಗಿ ಮಾತನಾಡಿದ ಅಧ್ಯಕ್ಷ ಉಮಾಪತಿ, ಮಧ್ಯ ಕರ್ನಾಟಕದ ಸಹಕಾರ ಬ್ಯಾಂಕುಗಳಲ್ಲಿ ಸ್ಥಾಪನೆಯ ಪ್ರಥಮ ಮತ್ತು ಅತೀ ಹೆಚ್ಚು ಲಾಭದಾಯಕ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಬ್ಯಾಂಕ್, ಮತ್ತೊಷ್ಟು ಅಭಿವೃದ್ಧಿ ಪಥದತ್ತ ಮುನ್ನಡೆಸಲು ಶ್ರಮಿಸುವುದಾಗಿ ತಿಳಿಸಿದರು.

ಉಪಾಧ್ಯಕ್ಷ ಜಯರುದ್ರೇಶ್ ಮಾತನಾಡಿ, ನಮ್ಮ ಬ್ಯಾಂಕಿನ ಎರಡು

**ನಿಟುವಳ್ಳಿಯಲ್ಲಿ ನೂತನ 7ನೇ ಶಾಖೆ ಕಟ್ಟಡ ನಿರ್ಮಾಣಕ್ಕೆ ಗುದ್ದಲಿ ಪೂಜೆ**

ಶಾಖೆಗಳನ್ನು ಹೊರತುಪಡಿಸಿ ಉಳಿದ 4 ಶಾಖೆಗಳು ಸ್ವಂತ ಕಟ್ಟಡಗಳನ್ನು ಹೊಂದಿದ್ದು, 7ನೇ ಶಾಖೆಯನ್ನು ಸ್ವಂತ ಕಟ್ಟಡದಲ್ಲೇ ಕಾರ್ಯಾರಂಭ ಮಾಡಲು ಸಿದ್ಧತೆ ನಡೆದಿರುವುದು ಈ ಬ್ಯಾಂಕಿನ ಹೆಗ್ಗಳಿಕೆ ಎಂದು ಸಂತಸ ಹಂಚಿಕೊಂಡರು.

ಬ್ಯಾಂಕಿನ ಹಿರಿಯ ನಿರ್ದೇಶಕರೂ ಆಗಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶುಭ ಹಾರೈಸಿದರು.

ನಿರ್ದೇಶಕರುಗಳಾದ ಅಂದನೂರು ಮುಪ್ಪಣ್ಣ, ದೇವರಮನೆ ಶಿವಕುಮಾರ್, ಅಜ್ಜಂಪುರ ಶೆಟ್ರು ವಿಜಯಕುಮಾರ್, ಎಂ. ಚಂದ್ರಶೇಖರ್, ಕಂಚಿಕೆರೆ ಮಹೇಶ್, ಶ್ರೀಮತಿ ಸುರೇಖಾ ಎಂ. ಚಿಗಟೇರಿ, ಶ್ರೀಮತಿ ಅರ್ಚನಾ ಡಾ. ರುದ್ರಮುನಿ, ಹೆಚ್.ಎಂ. ರುದ್ರಮುನಿಸ್ವಾಮಿ, ವಿ. ವಿಕ್ರಂ, ಮುಂಡಾಸ ವೀರೇಂದ್ರ, ಸೋಗಿ ಮುರುಗೇಶ್, ಇ.ಎಂ. ಮಂಜುನಾಥ, ಮಲ್ಲಿಕಾರ್ಜುನ ಕಣವಿ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್, ಉಪ ಪ್ರಧಾನ ವ್ಯವಸ್ಥಾಪಕ ಪ್ರಸನ್ನ, ಶಾಖಾ ವ್ಯವಸ್ಥಾಪಕರುಗಳಾದ ಮಹೇಶ್, ರುದ್ರೇಶ್, ಗಣೇಶ್, ಗೀತಾ, ವಿಜಯಕುಮಾರ್ ಇನ್ನಿತರರು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

## ಸುಮಲತ ಬೆಂಬಲ ಕೇಳಿದ ಹೆಚ್‌ಡಿಕೆ

ಬೆಂಗಳೂರು. ಮಾ. 31 – ಮಂಡ್ಯ ಕ್ಷೇತ್ರದ ಅಭ್ಯರ್ಥಿಯಾಗಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಮಂಡ್ಯದ ಹಾಲಿ ಸಂಸದೆ ಸುಮಲತ ಅಂಬರೀಶ್ ಅವರ ನಿವಾಸಕ್ಕೆ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

2019ರ ಲೋಕಸಭೆ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ನೀವು ಗೆದ್ದಿರಿ, ನನ್ನ ಮಗ ಸೋತಿದ್ದಾನೆ. ಆದದ್ದು ಆಗಿ ಹೋಗಿದೆ. ಎಲ್ಲವನ್ನೂ ಮರೆಯೋಣ. ನರೇಂದ್ರ ಮೋದಿಯವರನ್ನು ಮತ್ತೆ ಪ್ರಧಾನಿ ಮಾಡಬೇಕು. ಎಲ್ಲರೂ ಒಟ್ಟಾಗಿ ದುಡಿಯೋಣ. ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸಿ ಎಂದು ಕುಮಾರಸ್ವಾಮಿ ಕೋರಿದ್ದಾರೆ. ಕಾರ್ಯಕರ್ತರು ಮತ್ತು ಬೆಂಬಲಿಗರ ಸಭೆ ನಡೆಸಿ, ಏ.3 ರಂದು ತಮ್ಮ ನಿರ್ಧಾರ ಪ್ರಕಟಿಸುವುದಾಗಿ ಸುಮಲತ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ, ಸುಮಲತ ಅವರ ಪುತ್ರ ಅಭಿಷೇಕ್ ಅಂಬರೀಶ್ ಕೂಡ ಇದ್ದರು.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಒಂದು ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಅಣಬೇರು ಸರೋಜಮ್ಮ ಮತ್ತು ಮಕ್ಕಳು, ರಸವಂತಿ ಜ್ಯೂಸ್ ಸ್ಟಾಲ್ ಹಾಗೂ ಶ್ರೀಮತಿ ಮಂಜುಳಾ ಸಂಗಮೇಶ್ ಮತ್ತು ಫ್ಯಾಮಿಲಿ ಅವರು ಇಂದಿನ ದಾನಿಗಳಾಗಿದ್ದಾರೆ. ಈ ಸತ್ಕಾರ್ಯಕ್ಕೆ ದಾನ ಮಾಡ ಬಯಸುವವರು ಟ್ರಸ್ಟ್ ನಿರ್ದೇಶಕರಾದ ಶ್ರೀಮತಿ ಮಂಜುಳಾ ಬಸವಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

## ಸಾಮೂಹಿಕ ವಿವಾಹ, ಉಪನಯನ

ದಾವಣಗೆರೆ, ಮಾ.31- ನಗರದ ವಿಶ್ವಕರ್ಮ ಸಮಾಜದಿಂದ ಉಪನಯನ ಮತ್ತು ಸಾಮೂಹಿಕ ವಿವಾಹ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : ಮೊ. 9448127640, 9880342765.





















KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas